ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ ವಾರ್ತಾಪತ್ರಿಕೆ

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ
ಪ್ರಕಟಣೆ

ಸಂಪುಟ : 3 । ಸಂಚಿಕೆ : 11 | ನವೆಂಬರ್ : 2021 | ಪುಟಗಳು : 20 । ಬೆಲೆ : 25/–



## ಶಿಕ್ಷಣ, ಸಮಾಜ ಸೇವೆ, ಮಾನವೀಯತೆ ಹಾಗೂ ಸಹಕಾರ ಕ್ಷೀರ ಸಾಗರದ ರಾಯಭಾರಿ

## ಪುನೀತ್ ರಾಜ್‌ಕುಮಾರ್ ಅಜರಾಮರ

## ಯುವ ನಟನಿಗೆ ಭಾವಪೂರ್ಣ ಶ್ರದ್ಧಾಂಜಲಿ


ಸಮಸ್ತ ಕನ್ನಡ ನಾಡಿನ ಜನತೆಗೆ
ಸಹಕಾರಿ ಬಂಧುಗಳಿಗೆ ನಾಡಹಬ್ಬ
ಕನ್ನಡ ರಾಜ್ಯೋತ್ಸವದ
ಹಾರ್ದಿಕ ಶುಭಾಶಯಗಳು
68 ನೇ ಅಖಿಲ ಭಾರತ
ಸಹಕಾರ ಸಪ್ತಾಹ
2021
ಧ್ಯೇಯ : ಸಹಕಾರದ ಮೂಲಕ ಸಮೃದ್ಧಿ
ನವೆಂಬರ್ 14 ರಿಂದ 20ರವರೆಗೆ



ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ, ನಿರ್ದೇಶಕರುಗಳಾದ ಶ್ರೀ ಡಿ. ಚನ್ನಯ್ಯ, ಶ್ರೀ ಕೆ.ಕೆ. ಮಹೇಂದ್ರಪ್ರಸಾದ್‌ಗೌಡ, ಶ್ರೀ ಜಿ. ಮಲ್ಲಿಕಾರ್ಜುನಯ್ಯ ಹಾಗೂ ಶ್ರೀ ಪಿ.ಕೆ. ಜಯಕೃಷ್ಣೇಗೌಡರವರು ಪತ್ತಿನ ಮಹಾಮಂಡಳವು ನಿರ್ಮಿಸುತ್ತಿರುವ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದ ಸಂದರ್ಭ.



ಶಿಕಾರಿಪುರದಲ್ಲಿ ನಡೆದ ಸಹಕಾರಿ ಚೇತನ ಪುಸ್ತಕ ಬಿಡುಗಡೆ ಕಾರ್ಯಕ್ರಮದಲ್ಲಿ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡರು, ಸಂಸದರಾದ ಬಿ.ವೈ. ರಾಘವೇಂದ್ರ ಅವರುಗಳು ಹಿರಿಯ ಸಹಕಾರಿ ಡಾ. ಬಿ.ಡಿ. ಭೂಕಾಂತರವರನ್ನು ಸನ್ಮಾನಿಸಿದ ಸಂದರ್ಭ.



ಪ್ರಗತಿಶೀಲ ಮಹಿಳಾ ವಿವಿಧೋದ್ದೇಶ ಸಹಕಾರ ಸಂಘದ ಬೆಂಗಳೂರಿನ ಸೂರ್ಯನಗರ ಶಾಖೆಯ ಇ–ಸ್ಟಾಂಪಿಂಗ್ ಉಪಕೇಂದ್ರದ ಉದ್ಘಾಟನಾ ಸಮಾರಂಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ಕೆ.ಕೆ.ಮಹೇಂದ್ರಪ್ರಸಾದ್ ಗೌಡರವರು ಹಾಗೂ ಮಾಜಿ ನಿರ್ದೇಶಕರಾದ ಶ್ರೀ ಕೆ.ಜಯರಾಮಚಾರಿ ಹಾಗೂ ಇತರರು ಉಪಸ್ಥಿತರಿದ್ದರು.

SAHAKARA VARTHA PATHRIKE KANNADA MONTHLY
RNI-REG NO : KARKAN/2018/75796
POST REG NO : KABGW-1816/2019-2021
POSTING DATE : 1 & 5. EVERY MONTH
POSTED AT : P/C RMS BHAVAN, BANGALORE PSO,
Blore-26 PUBLISHED ON : 30TH of Previous Month

# ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಆಡಳಿತಮಂಡಳಿ


ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು


ಡಾ. ಬಿ.ಡಿ. ಭೂಕಾಂತ
ಉಪಾಧ್ಯಕ್ಷರು


ಶ್ರೀ ಸಿ.ಎಂ. ಮಾರೇಗೌಡ
ನಿರ್ದೇಶಕರು


ಶ್ರೀ ವಿ. ರಾಜು
ನಿರ್ದೇಶಕರು


ಡಾ. ಸಂಜಯ ಪಂ. ಹೊಸಮಠ
ನಿರ್ದೇಶಕರು


ಶ್ರೀ ಎಂ.ಜೆ. ನರೇಂದ್ರ ಕುಮಾರ
ನಿರ್ದೇಶಕರು


ಶ್ರೀ ಡಿ. ಚನ್ನಯ್ಯ
ನಿರ್ದೇಶಕರು


ಶ್ರೀ ಕೆ. ಕೃಷ್ಣಮೂರ್ತಿ
ನಿರ್ದೇಶಕರು


ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ನಿರ್ದೇಶಕರು


ಶ್ರೀ ಜಿ. ಮಲ್ಲಿಕಾರ್ಜುನಯ್ಯ
ನಿರ್ದೇಶಕರು


ಶ್ರೀ ತಮ್ಮಣ್ಣ ಬಿ. ಕೆಂಚರಡ್ಡಿ
ನಿರ್ದೇಶಕರು


ಶ್ರೀ ಧರೇಪ್ಪ ಎಂ. ಅಲಗೂರ
ನಿರ್ದೇಶಕರು


ಶ್ರೀ ಗುರುಪಾದಪ್ಪಗೌಡ ಬಿ. ಪಾಟೀಲ
ನಿರ್ದೇಶಕರು


ಶ್ರೀ ಹೊನ್ನಯ್ಯ ವಿ. ಹಿರೇಮಠ
ನಿರ್ದೇಶಕರು


ಶ್ರೀ ಪಿ.ಕೆ. ಜಯಕೃಷ್ಣೇಗೌಡ
ನಿರ್ದೇಶಕರು


ಶ್ರೀ ಶೇಖರಗೌಡ ಮಾಲಿಪಾಟೀಲ
ನಿರ್ದೇಶಕರು


ಶ್ರೀ ಹೆಚ್.ಟಿ. ನಾಗೇಶ್
ನಿರ್ದೇಶಕರು


ಶ್ರೀ ಡಿ.ಆರ್. ನಾಗೇಶಪ್ಪ
ನಿರ್ದೇಶಕರು


ಶ್ರೀ ಉಮೇಶ ಶಿ ಬಾಳಿ
ನಿರ್ದೇಶಕರು


ಶ್ರೀ ರವೀಂದ್ರ ಪ್ರಲ್ಹಾದ ಕಲಬುರ್ಗಿ
ನಿರ್ದೇಶಕರು


ಶ್ರೀ ಚಿತ್ತರಂಜನ್ ಬೋಳಾರ್
ನಿರ್ದೇಶಕರು


ಶ್ರೀ ಕೆ.ಎಸ್.ಗುರುಪ್ರಸಾದ್
ಸಲಹೆಗಾರರು


ಶ್ರೀಮತಿ ಪಿ.ಆಶಾಲತಾ
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರ)

ಇಂದ : ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು
ನಂ.16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

Printed at : Biligiri Printers
Chamrajpet, Bengaluru - 18.







ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡ
ಅಧ್ಯಕ್ಷರು


> ಕಳೆದೆರಡು ವರ್ಷಗಳಿಂದ ಕೋವಿಡ್ ಮಹಾಮಾರಿಯ ಸೋಂಕಿನ ಕಾರಣ ರಾಜ್ಯಾದಾದ್ಯಂತ ಸರಳವಾಗಿ ಆಚರಿಸಲಾಗಿತ್ತು.
> ಈ ಬಾರಿ ಸೋಂಕು ಕನಿಷ್ಠ ಪ್ರಮಾಣದಲ್ಲಿದ್ದರೂ ಸಾಮಾಜಿಕ ಅಂತರ ಕಾಪಾಡಿ, ಸ್ಯಾನಿಟೈಜರ್ ಮತ್ತು ಮಾಸ್ಕ್ ಬಳಕೆಯನ್ನು ಕಡ್ಡಾಯವಾಗಿ ಪಾಲಿಸಬೇಕಾಗಿದೆ.

# 68ನೇ ಅಖಿಲ ಭಾರತ ಸಹಕಾರ ಸಪ್ತಾಹ ಆಚರಣೆ ಅರ್ಥಪೂರ್ಣವಾಗಿರಲಿ

ರಾಷ್ಟ್ರೀಯ ಸಹಕಾರ ಯೂನಿಯನ್ನಿನ ಮಾರ್ಗದರ್ಶನದಲ್ಲಿ ಪ್ರತಿವರ್ಷದಂತೆ ಈ ವರ್ಷವೂ 68ನೇ ಅಖಿಲ ಭಾರತ ಸಹಕಾರ ಸಪ್ತಾಹವನ್ನು ಆಚರಿಸಲಾಗುತ್ತಿದೆ. ಈ ವರ್ಷದ ಸಹಕಾರ ಸಪ್ತಾಹದ ಧ್ಯೇಯವು "ಸಹಕಾರದ ಮೂಲಕ ಸಮೃದ್ಧಿ" ಎಂಬುದಾಗಿದೆ. ಜೊತೆಗೆ ಏಳು ದಿನಗಳ ಕಾಲ ಎನ್‌ಸಿಯೂಐ ನಿಗದಿಪಡಿಸಿರುವ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅರ್ಥಪೂರ್ಣವಾಗಿ ಆಚರಿಸಲು ರಾಜ್ಯದ ಎಲ್ಲಾ ರೀತಿಯ ಸಹಕಾರ ಮಹಾಮಂಡಳಗಳು, ಜಿಲ್ಲಾ, ತಾಲ್ಲೂಕು ಮತ್ತು ಪ್ರಾಥಮಿಕ ಹಂತದ ಸಹಕಾರ ಸಂಘಗಳ ಸಹಕಾರಿಗಳು–ಸಿಬ್ಬಂದಿ ವರ್ಗದವರು ಬದ್ದತೆಯೊಂದಿಗೆ ತೊಡಗಿಸಿಕೊಂಡು ಆಚರಣೆ ಮಾಡಬೇಕಿದೆ.

ಕಳೆದೆರಡು ವರ್ಷಗಳಿಂದ ಕೋವಿಡ್ ಮಹಾಮಾರಿಯ ಸೋಂಕಿನ ಕಾರಣ ರಾಜ್ಯಾದಾದ್ಯಂತ ಸರಳವಾಗಿ ಆಚರಿಸಲಾಗಿತ್ತು. ಈ ಬಾರಿ ಸೋಂಕು ಕನಿಷ್ಠ ಪ್ರಮಾಣದಲ್ಲಿದ್ದರೂ ಸಾಮಾಜಿಕ ಅಂತರ ಕಾಪಾಡಿ, ಸ್ಯಾನಿಟೈಜರ್ ಮತ್ತು ಮಾಸ್ಕ್ ಬಳಕೆಯನ್ನು ಕಡ್ಡಾಯವಾಗಿ ಪಾಲಿಸುವುದರ ಜೊತೆಗೆ ಸಹಕಾರ ಸಪ್ತಾಹ ಕಾರ್ಯಕ್ರಮಗಳಲ್ಲಿ ಸಹಕಾರಿಗಳು ಹೆಚ್ಚು ಉತ್ಸುಕತೆಯಿಂದ ತೊಡಗಿಸಿಕೊಂಡು ಪರಿಣಾಮಕಾರಿಯಾಗಿ ಆಚರಿಸಬೇಕಿದೆ.

ಸಹಕಾರ ವಲಯದ ಬೆಳವಣಿಗೆಗೆ ಪರಿಣಾಮಕಾರಿಯಾಗಲು, ಸಹಕಾರಿಗಳು ಒಂದೆಡೆ ಸೇರಿ ಹಿಂದಿನ ವರ್ಷದ ಸಾಧನೆಗಳು, ಮುಂದಿನ ವರ್ಷದ ಗುರಿ–ಸಾಧನೆಗಳ ಬಗ್ಗೆ ಚರ್ಚೆ ಆತ್ಮಾವಲೋಕನ ಮಾಡಿಕೊಳ್ಳಲು ಸಪ್ತಾಹ ಸೂಕ್ತ ವೇದಿಕೆಯಾಗಿದೆ. ಈ ನಿಟ್ಟಿನಲ್ಲಿ ನಾವೆಲ್ಲರೂ ಬದ್ದತೆಯಿಂದ ಸಹಕಾರ ಸಪ್ತಾಹ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ವಲಯವಾರು ಸಹಕಾರ ಸಂಘಗಳ ಬೆಳವಣಿಗೆಗೆ ಶ್ರಮಿಸಲು ಕಂಕಣ ಬದ್ದರಾಗೋಣ. ಎಲ್ಲಾ ಪತ್ತಿನ ಸಹಕಾರ ಸಂಘಗಳು, ಸಹಕಾರ ಧ್ವಜಾರೋಹಣ ನೆರವೇರಿಸಿ ಆಚರಿಸಲು ಮನವಿ ಮಾಡುತ್ತೇನೆ.

ಈ ವರ್ಷ ಸಹಕಾರ ಸಂಘಗಳ ವಾರ್ಷಿಕ ಮಹಾಸಭೆಯನ್ನು ಡಿಸೆಂಬರ್ 25 ರೊಳಗಾಗಿ ಅವಕಾಶ ಕಲ್ಪಿಸಿದ್ದು, ಸಂಘಗಳ ಲೆಕ್ಕಪರಿಶೋಧನಾ ವರದಿಗಳನ್ನು ನವೆಂಬರ್ 25, 2021 ರವರೆಗೆ ಅವಧಿ ವಿಸ್ತರಿಸಿರುವುದು ಕೂಡ ಸ್ವಾಗತಾರ್ಹ ವಿಚಾರವಾಗಿದೆ. ಆದ್ದರಿಂದ ಸಹಕಾರ ಇಲಾಖೆಯ ಮಾನ್ಯ ಸಚಿವರು, ಪ್ರಧಾನಕಾರ್ಯದರ್ಶಿ, ಸಹಕಾರ ಸಂಘಗಳ ನಿಬಂಧಕರು, ಲೆಕ್ಕಪರಿಶೋಧನಾ ಇಲಾಖೆಯ ನಿರ್ದೇಶಕರಿಗೆ ಧನ್ಯವಾದಗಳು.

ರಾಜ್ಯದ ಎಲ್ಲಾ ಸಹಕಾರಿ ಬಂಧುಗಳಿಗೆ ಮೊದಲಿಗೆ ನಾಡಹಬ್ಬ ಕನ್ನಡ ರಾಜ್ಯೋತ್ಸವ, ದೀಪಾವಳಿ ಹಾಗೂ ಸಹಕಾರಿಗಳ ಹಬ್ಬ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಹಾರ್ದಿಕ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಾಧ್ಯಕ್ಷರು / ಕಾರ್ಯನಿರ್ವಾಹಕ ಸಂಪಾದಕರು :
**ಡಾ. ಬಿ.ಡಿ. ಭೂಕಾಂತ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

# ೬೮ನೇ ಅಖಿಲ ಭಾರತ ಸಹಕಾರ ಸಪ್ತಾಹ

## ಧ್ಯೇಯ : ಸಹಕಾರದ ಮೂಲಕ ಸಮೃದ್ಧಿ

| | |
|---|---|
| 14.11.2021, ಭಾನುವಾರ ಬೆಂಗಳೂರು | ಕೊರೋನಾ ಸೋಂಕನ್ನು ನಿಭಾಯಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ ಮತ್ತು ಆರೋಗ್ಯ ಸಹಕಾರಿ ಸಂಸ್ಥೆಗಳನ್ನು ಬಲಪಡಿಸುವುದು. |
| 15.11.2021, ಸೋಮವಾರ ಉಡುಪಿ | ಸಹಕಾರಿ ಮಾರಾಟ, ಗ್ರಾಹಕ ರೂಪಾಂತರ ಮತ್ತು ಮೌಲ್ಯವರ್ಧನೆ. |
| 16.11.2021, ಮಂಗಳವಾರ ಚಿತ್ರದುರ್ಗ | ಸಹಕಾರ ಸಂಸ್ಥೆಗಳಿಗೆ ವ್ಯಾಪಾರ ಸುಲಭೀಕರಣ. |
| 17.11.2021 ಬುಧವಾರ ಕಲಬುರ್ಗಿ | ಅನ್ವೇಷಣೆಯನ್ನು ತ್ವರಿತಗೊಳಿಸುವಲ್ಲಿ ಸಹಕಾರ ಸಂಸ್ಥೆಗಳ ಪಾತ್ರ, ಉದ್ಯೋಗ ಸೃಷ್ಟಿ ಮತ್ತು ವೃತ್ತಿಪರತೆ. |
| 18.11.2021 ಗುರುವಾರ ಬಾಗಲಕೋಟೆ | ಉದ್ಯಮಶೀಲತೆ ಅಭಿವೃದ್ಧಿ ಮತ್ತು ಸಾರ್ವಜನಿಕ / ಖಾಸಗಿ ಸಹಕಾರಿ ಪಾಲುದಾರಿಕೆ ಬಲಪಡಿಸುವುದು. |
| 19.11.2021 ಶುಕ್ರವಾರ ಬೆಳಗಾವಿ | ಯುವಜನ, ಮಹಿಳೆ ಮತ್ತು ಅಬಲವರ್ಗದವರಿಗೆ ಸಹಕಾರ ಸಂಸ್ಥೆಗಳು. |
| 20.11.2021 ಶನಿವಾರ ಚಿಕ್ಕಮಗಳೂರು | ಸಹಕಾರ ಸಂಸ್ಥೆಗಳ ಮೂಲಕ ಆರ್ಥಿಕ ಸೇರ್ಪಡೆ – ಡಿಜಿಟಲೀಕರಣ ಮತ್ತು ಸಾಮಾಜಿಕ ಜಾಲತಾಣ. |

**ಸುಭಾಷಿತ :** ದೇವಾಲಯಗಳು ಮಾಟದ ಮನೆಗಳು, ಧರ್ಮದ ಗುರುಗಳು ಮಾಂತ್ರಿಕರು, ಕ್ಷೇತ್ರಗಳೆಲ್ಲವೂ ರೋಗದ ನೆಲೆ, ಮುಗ್ಧರು – ಮೂಢರು – ಯಾತ್ರಿಕರು – ಸಿದ್ಧಲಿಂಗಯ್ಯ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

### 68ನೇ ಅಖಿಲ ಭಾರತ ಸಹಕಾರಿ ಸಪ್ತಾಹದ ಆಚರಣೆ ಸಿದ್ದತಾ ಸಭೆ

# ಸಹಕಾರ ಸಪ್ತಾಹ : ಅರ್ಥಪೂರ್ಣ ಆಚರಣೆಗೆ ಸಚಿವ ಎಸ್.ಟಿ. ಸೋಮಶೇಖರ್ ಕರೆ



**ಬೆಂಗಳೂರು :** ಸಹಕಾರಿ ವಲಯ ಹಾಗೂ ಸಹಕಾರ ಇಲಾಖೆಯ ಅಸ್ತಿತ್ವವನ್ನು ಕಾಪಾಡಲು ಸಪ್ತಾಹ ಒಂದು ವೇದಿಕೆಯಾಗಬೇಕು. ಈ ನಿಟ್ಟಿನಲ್ಲಿ ಸಪ್ತಾಹದ ಆಚರಣೆಯನ್ನು ವ್ಯವಸ್ಥಿತವಾಗಿ ಹಾಗೂ ಅರ್ಥಪೂರ್ಣವಾಗಿ ಆಚರಿಸಲು ಸಹಕಾರಿಗಳಿಗೆ ಹಾಗೂ ಸಹಕಾರ ಇಲಾಖೆಯ ಅಧಿಕಾರಿಗಳಿಗೆ ಸಹಕಾರ ಸಚಿವರಾದ ಎಸ್.ಟಿ. ಸೋಮಶೇಖರ್ ಅವರು ಸಲಹೆ ಮಾಡಿದರು.

ನವೆಂಬರ್ 14 ರಿಂದ 20 ರವರೆಗೆ ನಡೆಯಲಿರುವ 68ನೇ ಅಖಿಲ ಭಾರತ ಸಹಕಾರ ಸಪ್ತಾಹದ ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು. ಮುಂದುವರೆದು ಮಾತನಾಡುತ್ತಾ ಸಹಕಾರ ಸಂಸ್ಥೆಗಳ ಬೆಳವಣಿಗೆಗೆ ಬದ್ಧತೆ ಇರಬೇಕು. ಸಹಕಾರ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ಸಹಕಾರ ವಲಯದ ಅಮೂಲಾಗ್ರ ಬೆಳವಣಿಗೆಗೆ ರಾಜ್ಯಮಟ್ಟದ ಸಹಕಾರ ಸಂಸ್ಥೆಗಳು ಅಗತ್ಯ ಸಲಹೆಗಳನ್ನು ನೀಡಬೇಕೆಂದು ಸೂಚಿಸಿದರು.

ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡ ಅವರು ಮಾತನಾಡಿ, ಪ್ರಸ್ತುತ ಸಹಕಾರಿ ವಲಯವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದು, ಅವುಗಳಲ್ಲಿ ರೈತಾಪಿ ಜನರಿಗೆ ನೆರವಾಗುವ ಕೃಷಿ ಪತ್ತಿನ ಸಹಕಾರ ಸಂಘಗಳು, ಭೂ ಅಭಿವೃದ್ಧಿ ಬ್ಯಾಂಕುಗಳು ಬೆಳವಣಿಗೆಯನ್ನು ಕಾಣಬೇಕಿದೆ. ಅವಕಾಶವನ್ನಾಗಿ ಮಾಡಿಕೊಂಡು ನಂಬಿಕೆ ಹಾಗೂ ವಿಶ್ವಾಸದಲ್ಲಿ ನಡೆಯುತ್ತಿರುವ ಸಹಕಾರ ಸಂಸ್ಥೆಗಳ ಬಲವರ್ಧನೆಗೆ ಅಗತ್ಯವಿರುವ ವಿಚಾರಗಳನ್ನು ಚರ್ಚಿಸುವ ವೇದಿಕೆಯಾಗಿ ನಾವು ಸಪ್ತಾಹವನ್ನು ಆಚರಣೆ ಮಾಡಬೇಕೆಂದು ಸೂಚಿಸಿದರು.

ಕರ್ನಾಟಕ ರಾಜ್ಯ ಹಾಲು ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಬಿ.ಸಿ. ಸತೀಶ್ ಅವರು ಮಾತನಾಡಿ ಕನಿಷ್ಠ 5 ವರ್ಷಗಳಿಗೊಮ್ಮೆ ಸಹಕಾರ ಕಾಯ್ದೆಗೆ ಅಮೂಲಾಗ್ರವಾದ ತಿದ್ದುಪಡಿ ಮಾಡಬೇಕು ಹಾಗೂ ಉತ್ತಮವಾಗಿ ಕಾರ್ಯನಿರ್ವಹಣೆ ಮಾಡುತ್ತಿರುವ ರಾಜ್ಯದ ಉನ್ನತಮಟ್ಟದ ಸಹಕಾರ ಸಂಸ್ಥೆಗಳಿಗೆ "ಸಹಕಾರ ರತ್ನ" ಪ್ರಶಸ್ತಿಯನ್ನು ನೀಡಬೇಕೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸೌಹಾರ್ದ ಸಹಕಾರಿಯ ಅಧ್ಯಕ್ಷರಾದ ಬಿ.ಎಚ್. ಕೃಷ್ಣಾರೆಡ್ಡಿ ಅವರು ಮಾತನಾಡಿ, ಸಹಕಾರಿ ವಲಯದಲ್ಲಿ ವಿಭಿನ್ನ ರೀತಿಯ ಸಹಕಾರ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿಯೊಂದು ವಲಯವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿವೆ. ಈ ಕುರಿತು ಸಂಶೋಧನೆ ಮಾಡಿ ಸರ್ಕಾರದ ಮುಂದೆ ಅವುಗಳ ಸಮಸ್ಯೆಗಳನ್ನು ತಂದು ಪರಿಹಾರೋಪಾಯಗಳನ್ನು ಕಂಡುಕೊಳ್ಳಬೇಕೆಂದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿರ್ದೇಶಕರಾದ



ಬಿ.ಸಿ. ಲೋಕಪ್ಪಗೌಡ ಅವರು ಮಾತನಾಡಿ ಸಹಕಾರ ಕಾಯ್ದೆಗೆ ಅಗತ್ಯವಿರುವ ತಿದ್ದುಪಡಿಯನ್ನು ತರಲು ಮಾತೃ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚನೆ ಮಾಡಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳದ ನಿರ್ದೇಶಕರಾದ ರುದ್ರೇಗೌಡ, ಕರ್ನಾಟಕ ರಾಜ್ಯ ಸಹಕಾರ ಮಹಿಳಾ ಮಹಾಮಂಡಳದ ಅಧ್ಯಕ್ಷರಾದ ಶಕುಂತಲಾ ಬೆಲ್ದಾಳೆ, ಸಹಕಾರ ಸುದ್ದಿ ಮಾಧ್ಯಮದ ಅಧ್ಯಕ್ಷರಾದ ಗುರುನಾಥ್ ಜ್ಯಾಂತೀಕರ್ ರವರುಗಳು ಸಪ್ತಾಹ ಆಚರಣೆಯನ್ನು ಕುರಿತಂತೆ ತಮ್ಮ ಸಲಹೆಗಳನ್ನು ನೀಡಿದರು.

ಕಾರ್ಯಕ್ರಮದಲ್ಲಿ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಕೆ. ಲಲಿತಾ ಜಿ.ಟಿ. ದೇವೇಗೌಡ, ಮಹಾಮಂಡಳದ ಉಪಾಧ್ಯಕ್ಷರಾದ ಜಗದೀಶ್ ಕವಟಗಿಮಠ, ಗ್ರಾಹಕ ಮಹಾಮಂಡಳದ ಅಧ್ಯಕ್ಷರಾದ ಜಿ.ಪಿ. ಪಾಟೀಲ್, ಮಹಾಮಂಡಳದ ನಿರ್ದೇಶಕರುಗಳಾದ ಹೆಚ್.ಎನ್. ಅಶೋಕ್, ಎ.ಸಿ. ನಾಗರಾಜ್, ಆರ್. ರಾಮರೆಡ್ಡಿ, ಜೆ.ಎಂ. ಶಿವಪ್ರಸಾದ್, ಹಾಸನ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಸೋಮನಹಳ್ಳಿ ನಾಗರಾಜ್, ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾದ ಡಾ. ಬಿ.ಡಿ. ಭೂಕಾಂತ್, ನಿರ್ದೇಶಕರುಗಳಾದ ಡಾ. ಸಂಜಯ ಪಿ. ಹೊಸಮಠ, ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ, ಹೊನ್ನಯ್ಯ ಹಿರೇಮಠ, ಗುರುಪಾದಪ್ಪ ಗೌಡ ಬಿ. ಪಾಟೀಲ, ಬಮೂಲ್ ಅಧ್ಯಕ್ಷರಾದ ಎಂ.ಡಿ. ನರಸಿಂಹಮೂರ್ತಿ, ಬೆಂಗಳೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಿ. ಹನುಮಂತಯ್ಯ, ಬಾಗಲಕೋಟೆ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷರಾದ ಕಾಶೀನಾಥ್ ಹುಡೇದ್, ಧಾರವಾಡ ಜಿಲ್ಲಾ ಸಹಕಾರ ಯೂನಿಯನ್ನಿನ ಅಧ್ಯಕ್ಷರಾದ ಬಾಪೂಗೌಡ ಪಾಟೀಲ್, ಧಾರವಾಡ ಹಾಲು ಒಕ್ಕೂಟದ ಅಧ್ಯಕ್ಷರಾದ ಶಂಕರ್ ವಿ. ಮುಗದ್, ಸಹಕಾರ ಸಂಘಗಳ ನಿಬಂಧಕರಾದ ಎಸ್. ಜಿಯಾವುಲ್ಲಾ, ಅಪೆಕ್ಸ್ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿ ಸಿ.ಎನ್. ದೇವರಾಜ್, ಸಹಕಾರ ಸಂಘಗಳ ಅಪರ ನಿಬಂಧಕರಾದ ಕೆ.ಎಸ್. ನವೀನ್, ವೈ.ಹೆಚ್. ಗೋಪಾಲಕೃಷ್ಣ, ಎ.ಸಿ. ದಿವಾಕರ್, ಆರ್. ಶ್ರೀಧರ್, ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕರಾದ ಎಸ್.ಎನ್. ಅರುಣ್‌ಕುಮಾರ್, ಕಾರ್ಯದರ್ಶಿ ಲಕ್ಷ್ಮೀಪತಯ್ಯ ಹಾಗೂ ಹಿರಿಯ – ಕಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



# ಅಪೆಕ್ಸ್ ಬ್ಯಾಂಕಿನ 96ನೇ ವಾರ್ಷಿಕ ಮಹಾಸಭೆ
# ಶೀಘ್ರವೇ ಎಲ್ಲಾ ಪ್ಯಾಕ್ಸ್‌ಗಳಿಗೆ ಏಕರೂಪ ತಂತ್ರಾಂಶ ಅಳವಡಿಕೆ :
# 60 ಕೋಟಿ ರೂ. ನಿವ್ವಳ ಲಾಭ : ಬೆಳ್ಳಿ ಪ್ರಕಾಶ್ ಸಂತಸ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನ 96ನೇ ವಾರ್ಷಿಕ ಮಹಾಸಭೆ ದಿನಾಂಕ : 23.10.2021 ರಂದು ಬ್ಯಾಂಕಿನ ಸಭಾಂಗಣದಲ್ಲಿ ಶಾಸಕರೂ ಹಾಗೂ ಬ್ಯಾಂಕಿನ ಅಧ್ಯಕ್ಷರೂ ಆದ ಬೆಳ್ಳಿ ಪ್ರಕಾಶ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು 2020–21ನೇ ಸಾಲಿನಲ್ಲಿ ಬ್ಯಾಂಕು ಎಲ್ಲಾ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಉತ್ತಮ ಸಾಧನೆ ಮಾಡಿದ್ದು, ದಿನಾಂಕ: 31.3.2021ಕ್ಕೆ 11,868.73 ಕೋಟಿ ಠೇವಣಿ ಸಂಗ್ರಹ, ದುಡಿಯುವ ಬಂಡವಾಳ ರೂ. 24755.95 ಕೋಟಿ ವರೆಗೆ ಏರಿಕೆಯಾಗಿದ್ದು, ವರದಿ ಸಾಲಿನಲ್ಲಿ 300.41 ಕೋಟಿ ರೂ. ಒಟ್ಟಾರೆ ಲಾಭ ಗಳಿಸಿದ್ದು ತೆರಿಗೆಗಳು ಸೇರಿದಂತೆ ಎಲ್ಲಾ ಅವಕಾಶಗಳನ್ನು ಕಲ್ಪಿಸಿದ ನಂತರ 60 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದರು.

ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿಯ ಪ್ರಮಾಣವು ದಿನಾಂಕ : 31.3.2021ಕ್ಕೆ ಶೇಕಡಾ 2.5 ರಷ್ಟು ಇರುತ್ತದೆ ಎಂದು ತಿಳಿಸಿದ ಅವರು ಅಪೆಕ್ಸ್ ಬ್ಯಾಂಕು ನಬಾರ್ಡ್‌ನಿಂದ ಸಾಲ ಪಡೆದು ಜಿಲ್ಲಾ ಬ್ಯಾಂಕುಗಳಿಗೆ ವಿತರಿಸುತ್ತಿರುವ ಸಾಲಗಳ ಮೇಲಿನ ಬಡ್ಡಿದರದ ಮಾರ್ಜಿನ್‌ನ್ನು ಗಣನೀಯ ಪ್ರಮಾಣದಲ್ಲಿ ಇಳಿಸಲಾಗಿದೆ ಎಂದರು. ಪ್ರಸ್ತುತ ಪ್ಯಾಕ್ಸ್‌ಗಳನ್ನು ಬಹುಸೇವಾ ಕೇಂದ್ರಗಳನ್ನಾಗಿ ಪರಿವರ್ತಿಸುವ ಯೋಜನೆಯಡಿ ಕರ್ನಾಟಕ ರಾಜ್ಯವು ದೇಶದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ. ಮುಂದಿನ ದಿನಗಳಲ್ಲಿ ಪ್ಯಾಕ್ಸ್‌ಗಳು ಸದೃಢಗೊಳ್ಳುತ್ತವೆ ಹಾಗೂ ಪಾರದರ್ಶಕ ಆಡಳಿತಕ್ಕಾಗಿ ಎಲ್ಲಾ ಪ್ಯಾಕ್ಸ್‌ಗಳಿಗೂ ಏಕರೂಪದ ತಂತ್ರಾಂಶಗಳನ್ನು ಅಳವಡಿಸಲಾಗುವುದು ಎಂದರು.

ಕಳೆದ ವರ್ಷದ ಕೋವಿಡ್–19ರ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ ನಬಾರ್ಡ್ ಮೂಲಕ ರಾಜ್ಯದ ರೈತರ ನೆರವಿಗಾಗಿ ವಿಶೇಷ ಆರ್ಥಿಕ ಪ್ಯಾಕೇಜ್ (ಎಸ್‌ಎಲ್‌ಎಫ್)



ಘೋಷಣೆ ಮಾಡಿತ್ತು. ಈ ಯೋಜನೆಯಡಿಯಲ್ಲಿ 1700 ಕೋಟಿ ರೂ. ಸಾಲವನ್ನು ಡಿಸಿಸಿ ಬ್ಯಾಂಕುಗಳ ಮೂಲಕ ಪ್ಯಾಕ್ಸ್‌ಗಳಿಗೆ ಹಂಚಿಕೆ ಮಾಡಿ ಅಪೆಕ್ಸ್ ಬ್ಯಾಂಕ್ ರಾಜ್ಯದ ನೆರವಿಗೆ ಬಂದಿದೆ ಎಂದು ತಿಳಿಸಿದರು.

**ರೈತರಿಗೆ ಸಾಲ ವಿತರಣೆ :** 2021–22ನೇ ಸಾಲಿನಲ್ಲಿ ಬ್ಯಾಂಕು 30,25,788 ರೈತರಿಗೆ ಒಟ್ಟು 19,370 ಕೋಟಿ ರೂ.ಗಳಷ್ಟು ಅಲ್ಪಾವಧಿ ಸಾಲವನ್ನು ಡಿಸಿಸಿ ಬ್ಯಾಂಕುಗಳ ಮೂಲಕ ನೀಡುವ ಗುರಿ ಹೊಂದಿದೆ. ಹಾಗೂ 29,856 ರೈತರಿಗೆ ಒಟ್ಟು 980 ಕೋಟಿ ರೂ.ಗಳ ಮಧ್ಯಮಾವಧಿ ಕೃಷಿ ಸಾಲವನ್ನು ಮತ್ತು ನಗರಪ್ರದೇಶದಲ್ಲಿ ತನ್ನ ಶಾಖೆಗಳ ಮೂಲಕ 13644 ಕೋಟಿ ರೂ.ಗಳ ಕೃಷಿಯೇತರ ಸಾಲವನ್ನು ನೀಡುವ ಗುರಿ ಹೊಂದಿದೆ ಎಂದು ಅವರು ತಿಳಿಸಿದರು.

**ವಿಮಾ ಯೋಜನೆಗಳು :** ಸಾಮಾಜಿಕ ಕಲ್ಯಾಣ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರವು ಅನುಷ್ಠಾನಗೊಳಿಸಿರುವ "ಪ್ರಧಾನಮಂತ್ರಿ ಜೀವನ್ ಜ್ಯೋತಿ ಭೀಮಾ ಯೋಜನೆ" ಹಾಗೂ "ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆಗಳ" ಯಶಸ್ವಿ ನಿರ್ವಹಣೆ ಹಾಗೂ ತ್ವರಿತಗತಿಯಲ್ಲಿ ಸಂತ್ರಸ್ತರಿಗೆ ವಿಮಾ ಮೊತ್ತವನ್ನು ಇತ್ಯರ್ಥಗೊಳಿಸುವಲ್ಲಿ ಬ್ಯಾಂಕು ಯಶಸ್ವಿಯಾಗಿ ಕಾರ್ಯನಿರ್ವಹಿಸಿದೆ ಎಂದು ಅಧ್ಯಕ್ಷರು ಸಭೆಗೆ ತಿಳಿಸಿದರು.

**ಕೇಂದ್ರ ಸಚಿವರಿಗೆ ಕೃತಜ್ಞತೆ ಸಲ್ಲಿಕೆ :** ಇತ್ತೀಚೆಗೆ ಕೇಂದ್ರ ಸರ್ಕಾರ ರಚಿಸಿರುವ ಸಹಕಾರ ಇಲಾಖೆಯ ಮೂಲಕ ಸಹಕಾರದಿಂದ ಸಮೃದ್ಧಿ ಎಂಬ ರಾಷ್ಟ್ರೀಯ ಸಮ್ಮೇಳನವನ್ನು ಆಯೋಜಿಸಿ ಕೇಂದ್ರ ಸರ್ಕಾರದಿಂದ ಶೀಘ್ರದಲ್ಲಿಯೇ ನೂತನ ಸಹಕಾರ ನೀತಿಯನ್ನು ಜಾರಿಗೆ ತರುವುದಾಗಿ ಹಾಗೂ ಪ್ಯಾಕ್ಸ್‌ಗಳ ಡಿಜಿಟಲೀಕರಣ ಮತ್ತು ಏಕರೂಪದ ತಂತ್ರಾಂಶ ಅಭಿವೃದ್ಧಿಪಡಿಸುವುದು ಹಾಗೂ ರೈತರ ಉತ್ಪಾದಕ ಸಂಸ್ಥೆಗಳಾಗಿ ಪರಿವರ್ತಿಸುವುದಾಗಿ ಸಚಿವ ಅಮಿತ್ ಷಾ ಅವರು ಘೋಷಣೆ ಮಾಡಿದ್ದು, ಇದು ರೈತ ಸಮುದಾಯಕ್ಕೆ ಉಪಯುಕ್ತವಾಗಲಿದೆ ಎಂದು ಅವರು ಗೃಹ ಮತ್ತು ಸಹಕಾರ ಸಚಿವರಿಗೆ ಅಪೆಕ್ಸ್ ಬ್ಯಾಂಕಿನ ಮೂಲಕ ಕೃತಜ್ಞತೆಗಳನ್ನು ಸಲ್ಲಿಸಿದರು.

ಅತ್ಯುತ್ತಮ ಸಾಧನೆ ಮಾಡಿರುವ ಡಿಸಿಸಿ ಬ್ಯಾಂಕುಗಳು ಮತ್ತು ಪ್ಯಾಕ್ಸ್‌ಗಳ ಪ್ರತಿನಿಧಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.



ಬೆಂಗಳೂರಿನ ಕಲ್ಯಾಣ ನಗರದಲ್ಲಿರುವ ಜ್ಞಾನಸೌಧದಲ್ಲಿ ರೈತ ಗೀತಾ ಮತ್ತು ವಿ.ಬಿ.ಎಸ್.ಬಿ ಮೀಡಿಯಾ ಇವರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಹಕಾರಿ ಮತ್ತು ಸಮಾಜ ಸೇವೆಯನ್ನು ಗುರುತಿಸಿ ಡಾ. ಬಿ.ಡಿ. ಭೂಕಾಂತರವರಿಗೆ ಗೌರವಿಸಿದ ಸಂದರ್ಭ
(Humanity India Awards-2021)



ಶ್ರೀ ಯೋಗಿನಾರಾಯಣ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು ಈ ಸಹಕಾರ ಸಂಘವು ನಿರ್ಮಿಸಿರುವ “ಶ್ರೀ ಯೋಗಿ ನಾರಾಯಣ ಭವನ”ದ ಉದ್ಘಾಟನಾ ಸಂದರ್ಭದಲ್ಲಿ ಪತ್ತಿನ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಡಿ.ಚನ್ನಯ್ಯರವರು ಹಾಗು ಶ್ರೀ ಕೆ.ಕೆ. ಮಹೇಂದ್ರಪ್ರಸಾದ್ ಗೌಡರವರು ಭಾಗವಹಿಸಿ ಶುಭಕೋರಿದ ಸಂದರ್ಭ.



## ಶಿಕ್ಷಣ, ಸಮಾಜಸೇವೆ, ಮಾನವೀಯತೆ ಹಾಗೂ ಕ್ಷೀರ ಸಾಗರದ ಸಹಕಾರಿ ರಾಯಭಾರಿ

# ದೊಡ್ಮನೆ ಹುಡುಗ, ಯುವರತ್ನ, ಅಪ್ಪು ಖ್ಯಾತಿಯ

## ಪುನೀತ್ ರಾಜಕುಮಾರ ಅಜರಾಮರ



**ಬೆಂಗಳೂರು** : ಮೇರು ನಟ ದಿವಂಗತ ಡಾ. ರಾಜಕುಮಾರ್ ರವರ ಸುಪುತ್ರ, ಚಿತ್ರನಟ ಪುನೀತ್ ರಾಜಕುಮಾರ್ (46) ರವರು ದಿನಾಂಕ : 29.10.2021ರಂದು ಹೃದಯಾಘಾತದಿಂದ ನಿಧನ ಹೊಂದಿದರು. ಸರ್ಕಾರಿ ಗೌರವಗಳೊಂದಿಗೆ ಅವರ ಅಂತಿಮ ಸಂಸ್ಕಾರವನ್ನು ನೆರವೇರಿಸಲಾಯಿತು. ಇದಕ್ಕೂ ಮುನ್ನ ಚಿತ್ರರಂಗದ ಗಣ್ಯರು ಸೇರಿದಂತೆ ಲಕ್ಷಾಂತರ ಅಭಿಮಾನಿಗಳು ಮೃತರ ಅಂತಿಮ ದರ್ಶನ ಪಡೆದರು.

ಅಂದು ಬೆಳಗ್ಗೆ ಪುನೀತ್ ರಾಜಕುಮಾರ ಆಸ್ಪತ್ರೆಗೆ ದಾಖಲಾಗಿರುವ ಸುದ್ದಿ ತಿಳಿದು ರಾಜ್ಯದ ಕೋಟ್ಯಾಂತರ ಅಭಿಮಾನಿಗಳು "ಓ ದೇವರೆ ಪುನೀತ್ ಆರೋಗ್ಯ ಸುಧಾರಿಸುವಂತಾಗಲಿ" ಎಂದು ದೇವರ ಮೊರೆ ಹೋಗಿದ್ದರು. ಮಧ್ಯಾಹ್ನದ ವೇಳೆಗೆ ಪುನೀತ್ ಇನ್ನಿಲ್ಲ ಎಂಬ ಸುದ್ದಿ ಅದೇ ಕೋಟ್ಯಾಂತರ ಅಭಿಮಾನಿಗಳ ಕಣ್ಣುಗಳನ್ನು ಒದ್ದೆಯಾಗಿಸಿದ್ದವು.

### ಸಾವಿನಲ್ಲೂ ಸಾರ್ಥಕತೆ ಮೆರೆದ ಪುನೀತ್

ಪುನೀತ್ ರಾಜಕುಮಾರ್ ಅವರ ನಿಧನ ಬಳಿಕ ಕುಟುಂಬದ ಸದಸ್ಯರ ಮನವಿಯ ಮೇರೆಗೆ ಅವರ ಎರಡು ಕಣ್ಣುಗಳನ್ನು ಸಂರಕ್ಷಿಸಲಾಗಿದೆ. ಈ ಕಣ್ಣುಗಳನ್ನು ಒಂದಿಬ್ಬರು ಅಂಧತ್ವದಿಂದ ಬಳಲುತ್ತಿರುವವರೆಗೆ ಒಂದೊಂದು ಕಣ್ಣುಗಳನ್ನು ಅಳಡಿಸಿ ಅವರ ಬಾಳಿನಲ್ಲಿ ದೃಷ್ಠಿಯ ಬೆಳಕನ್ನು ಮೂಡಿಸಲಾಗುವುದು. ಈ ಮೂಲಕ ಅಕಾಲಿಕ ಮರಣದ ನಡುವೆಯು ಪುನೀತ್ ರಾಜಕುಮಾರ್ ರವರು ತಮ್ಮ ಎರಡು ಕಣ್ಣುಗಳನ್ನು ದಾನ ಮಾಡುವ ಮೂಲಕ ಮಾನವಿತೆಯನ್ನು ಮೆರೆದಿದ್ದಾರೆ.

ಈ ಹಿಂದೆ ಡಾ. ರಾಜಕುಮಾರ್ ರವರು ಸಹ ನೇತ್ರದಾನ ಅಭಿಯಾನಕ್ಕೆ ಚಾಲನೆ ನೀಡಿ ಮಾದರಿಯಾಗಿದ್ದರು.

### ಕ್ಷೀರಸಾಗರದ ಸಹಕಾರಿ ರಾಯಬಾರಿ

ಕರ್ನಾಟಕ ಸಹಕಾರ ಹಾಲು ಮಹಾಮಂಡಳದ ನಂದಿನಿ ಉತ್ಪನ್ನಗಳ ರಾಯಬಾರಿಯಾಗಿ ಪುನೀತ್ ರಾಜಕುಮಾರ ಅವರು ಯಾವುದೇ ರೀತಿಯ ಸಂಭಾವನೆಯನ್ನು ಪಡೆಯದೇ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ತಮ್ಮದೇ ಕೊಡುಗೆ ನೀಡಿರುತ್ತಾರೆ. ಈ ಹಿಂದೆ ವರನಟ ಡಾ. ರಾಜಕುಮಾರ ಅವರು ಸಹ ಕೆಎಂಎಫ್ ಉತ್ಪನ್ನಗಳ ಸಹಕಾರಿ ರಾಯಬಾರಿಯಾಗಿ ಯಾವುದೇ ಸಂಭಾವನೆ ಪಡೆಯದೇ ಗ್ರಾಮೀಣ ಹೈನುಗಾರರ ಆರ್ಥಿಕ ಅಭಿವೃದ್ಧಿಗೆ ತಮ್ಮ ಸೇವೆಯನ್ನು ಮುಡಿಪಾಗಿರಿಸಿದ್ದರು ಎಂಬುದು ಸ್ಮರಣೀಯ ವಿಚಾರವಾಗಿದೆ.

### ಗಣ್ಯರ ಕಂಬನಿ

ಯುವ ನಟ ಪುನೀತ್ ರಾಜಕುಮಾರ್ ರವರ ಅಕಾಲಿಕ ಮರಣಕ್ಕೆ ಪ್ರಧಾನಮಂತ್ರಿಗಳಾದ ನರೇಂದ್ರ ಮೋದಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಹಕಾರಿ ಸಚಿವರಾದ ಎಸ್.ಟಿ ಸೋಮಶೇಖರ್ ಅವರು ಸೇರಿದಂತೆ ಸಚಿವರುಗಳು, ಮಾಜಿ ಮುಖ್ಯ ಮಂತ್ರಿಗಳಾದ ಎಸ್.ಎಂ. ಕೃಷ್ಣ, ಬಿ.ಎಸ್.ಯಡಿಯೂರಪ್ಪ, ಹೆಚ್.ಡಿ. ಕುಮಾರಸ್ವಾಮಿ, ಸಿದ್ದರಾಮಯ್ಯ, ಜನ ಪ್ರತಿನಿಧಿಗಳು, ಅಭಿಮಾನಿ ಬಳಗ, ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡರು, ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ, ಉಪಾಧ್ಯಕ್ಷರಾದ ಡಾ. ಬಿ.ಡಿ. ಭೂಕಾಂತ್, ಆಡಳಿತ ಮಂಡಳಿಯ ನಿರ್ದೇಶಕರುಗಳು, ಅಧಿಕಾರಿ ವರ್ಗದವರುಗಳು ಸಂತಾಪ ಸೂಚಿಸಿ ಕಂಬನಿ ಮಿಡಿದಿದ್ದಾರೆ. ಅವರ ಕುಟುಂಬಕ್ಕೆ ಪುನೀತ್ ರಾಜಕುಮಾರ್ ಅವರ ಮರಣ ನೋವಿನ ಶಕ್ತಿಯನ್ನು ಭರಿಸುವಂತಾಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿದ್ದಾರೆ.



# ಯಶವಂತಪುರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ.,

**ನಂ.61, 7ನೇ ಮುಖ್ಯರಸ್ತೆ, ಗೋಕುಲ 1ನೇ ಹಂತ, ಯಶವಂತಪುರ, ಬೆಂಗಳೂರು-560022**

ಯಶವಂತಪುರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ನಂ.61, 7ನೇ ಮುಖ್ಯರಸ್ತೆ, ಗೋಕುಲ 1ನೇ ಹಂತ, ಯಶವಂತಪುರ, ಬೆಂಗಳೂರು-560022 ಈ ಸಹಕಾರ ಸಂಘವು 1974 ರಲ್ಲಿ ಪ್ರಾರಂಭವಾಗಿ, ಇದರ ಕಾರ್ಯಕ್ಷೇತ್ರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬಿಡಿಎ ಮತ್ತು ಬೆಂಗಳೂರು ನಗರಜಿಲ್ಲೆಯನ್ನು ಒಳಗೊಂಡಿದ್ದು. ಸತತವಾಗಿ ಆಡಿಟ್ ಶ್ರೇಣಿಯು "ಎ" ತರಗತಿಯಲ್ಲಿದ್ದು 3 ಶಾಖೆಗಳು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಉಚಿತ ಲಾಕರ್ ಸೌಲಭ್ಯವಿದೆ, ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಶಸ್ತ್ರಚಿಕಿತ್ಸೆವೆಚ್ಚ ರೂ 20,000/-ಗಳು ನೀಡಲಾಗುತ್ತಿದೆ ಹಾಗೂ ಸದಸ್ಯರ ವಯಸ್ಸು 75 ವರ್ಷ ಮೇಲ್ಪಟ್ಟವರಿಗೆ ಸನ್ಮಾನ ಮಾಡಲಾಗುತ್ತಿದೆ. ಈ ಸಹಕಾರ ಸಂಘವು ಉನ್ನತ ಪ್ರಗತಿಯಲ್ಲಿ ಸಾಗುತ್ತಿದೆ.

## ದಿನಾಂಕ : 01/04/2020 ರಿಂದ 31/03/2021ರವರೆಗಿನ ಲಾಭ-ನಷ್ಟದ ತಃಖ್ತೆ

| ನಷ್ಟಾಂಶ ವಿವರ | ಮೊಬಲಗು | ಲಾಭಾಂಶ ವಿವರ | ಮೊಬಲಗು |
|---|---|---|---|
| ಆಡಳಿತಾತ್ಮಕ ವೆಚ್ಚಗಳು | 94,53,832.15 | ಸದಸ್ಯರಿಂದ ಆದಾಯ ಬಡ್ಡಿ | 5,90,59,785.56 |
| ಪುಸ್ತಕ ಫಾರಂ ದಾಸ್ತಾನು | 39,570.20 | ಮತ್ತು ಇತರೆ | 25,90,186.00 |
| ಠೇವಣಿಗಳ ಮೇಲೆ ಬಡ್ಡಿ ಪಾವತಿಸಿದ್ದು | 5,62,36,994.24 | ಸೊಸೈಟಿ ಹೂಡಿಕೆಗಳ ಬಡ್ಡಿ | 2,34,50,179.00 |
| ಲೆಕ್ಕಪರಿಶೋಧನಾ ಶುಲ್ಕ | 59,150.00 | ಬ್ಯಾಂಕು ಹೂಡಿಕೆಗಳ ಬಡ್ಡಿ | |
| ಜಿ.ಎಸ್.ಟಿ ಮತ್ತು ಆದಾಯ ತೆರಿಗೆ ಪಾವತಿ | 61,86,170.00 | | |
| ಸವಕಳಿಗಳು | 15,88,479.00 | | |
| ನಿವ್ವಳ ಲಾಭ-1,15,35,954-97 | | | |
| ಸೊಸೈಟಿ ಮತ್ತು ಸದಸ್ಯರಿಂದ ಆದಾಯ | 1,02,97,196.30 | | |
| ಬ್ಯಾಂಕು ಹೂಡಿಕೆಗಳ ಬಡ್ಡಿ | 12,38,758.67 | | |
| ಒಟ್ಟು | **8,51,00,150.56** | ಒಟ್ಟು | **8,51,00,150.56** |

## ದಿನಾಂಕ : 31/03/2021 ರಂದು ಇದ್ದಂತೆ ಸೊಸೈಟಿಯ ಆಸ್ತಿ-ಜವಾಬ್ದಾರಿ ತಃಖ್ತೆ

| ಜವಾಬ್ದಾರಿಗಳ ವಿವರ | ಮೊಬಲಗು | ಲಾಭಾಂಶ ವಿವರ | ಮೊಬಲಗು |
|---|---|---|---|
| ಷೇರು ಧನ | 4,81,54,700.00 | ನಗದು ಶಿಲ್ಕ | 37,27,705.24 |
| ಅಪದ್ದನ ನಿಧಿ | 3,83,42,489.00 | ಬ್ಯಾಂಕಿನ ಶಿಲ್ಕು | 3,34,63,956.31 |
| ಇತರೆ ನಿಧಿಗಳು | 5,12,12,269.39 | ಬ್ಯಾಂಕಿನಲ್ಲಿ ಹೂಡಿಕೆ | 27,25,93,646.53 |
| ಸವಕಳಿ ನಿಧಿಗಳು | 1,28,74,323.18 | ಸ್ಥಿರಾಸ್ತಿಗಳು | 2,45,49,026.18 |
| ಇತರೆ ಜನಾಬ್ದಾರಿಗಳು | 1,47,50,654.34 | ಚರಾಸ್ತಿಗಳು | 1,37,33,671.50 |
| ಠೇವಣಾತಿಗಳು | 77,07,32,433.04 | ಸಾಲಗಳು | 58,94,55,028.66 |
| ಠೇವಣಿಗಳ ಮೆಲೆ ಬಡ್ಡಿ ಕೊಡಬೇಕಾದದ್ದು | 1,94,76,878.00 | ಮುಂಗಡಗಳು | 23,89,038.00 |
| ಸಿಬ್ಬಂದಿ ಖಾತೆಗಳು | 1,26,48,002.00 | ಇತರೆ ನಿಧಿಗಳ ಠೇವಣಿ | 2,64,46,064.00 |
| ಸನ್ನದು ಲೆಕ್ಕಪರಿಶೋಧನಾ ಶುಲ್ಕ | 65,000.00 | ವಾಹನಗಳು | 4,31,939.00 |
| 2020-21ನೆ ಸಾಲಿನ ನಿವ್ವಳ ಲಾಭ | 1,15,35,954.97 | ಇತರೆ ಆಸ್ತಿಗಳು | 3,54,468.50 |
| | | ಸಿಬ್ಬಂದಿ ಹೂಡಿಕೆಗಳು | 1,26,48,160.00 |
| ಒಟ್ಟು | **97,97,92,703.92** | ಒಟ್ಟು | **97,97,92,703.92** |

| **ಮುನಿಸ್ವಾಮಿ.ಎನ್** | **ಚನ್ನಕೇಶವ.ಕೆ** | **ರಾಜಣ್ಣ ಎಸ್.** | **ರಾಜೀವ್ ಎಸ್.ಎನ್.** |
|---|---|---|---|
| ಅಧ್ಯಕ್ಷರು | ಉಪಾಧ್ಯಕ್ಷರು | ಪ್ರ.ದ.ಸಹಾಯಕರು | ವ್ಯವಸ್ಥಾಪಕರು |



# 12. 35 ಲಕ್ಷ ರೈತರಿಗೆ 9,136. 89 ಕೋಟಿ ರೂ. ಕೃಷಿ ಸಾಲ ನೀಡಿಕೆ

## - ಸಹಕಾರ ಸಚಿವ ಎಸ್.ಟಿ. ಸೋಮಶೇಖರ್

- **ಅಕ್ಟೋಬರ್ ತಿಂಗಳೊಳಗೆ 12,35,033 ರೈತರಿಗೆ ಸಾಲ ವಿತರಣೆ**
- **ಅಕ್ಟೋಬರ್ ತಿಂಗಳಿಗೆ ಶೇ. 72.76 ಗುರಿ ತಲುಪಿದ ಡಿಸಿಸಿ ಬ್ಯಾಂಕ್‌ಗಳು**
- **30 ಲಕ್ಷ ರೈತರಿಗೆ 20810 ಕೋಟಿ ರೂ. ಕೃಷಿ ಸಾಲ ನೀಡಿಕೆ ಗುರಿಯಲ್ಲಿ ಈ ಸಾಧನೆ**
- **ಪ್ರಸಕ್ತ ಸಾಲಿನಲ್ಲಿ ಶೇಕಡಾ 125 ಕೃಷಿ ಸಾಲ ನೀಡಿಕೆ ಗುರಿ ನಮ್ಮದು**
- **ಕಳೆದ ಸಾಲಿನಲ್ಲಿ ಶೇಕಡಾ 115 ಸಾಧನೆ ತೋರಿದ್ದ ಕೃಷಿ ಪತ್ತಿನ ಸಂಸ್ಥೆಗಳು**

**ಬೆಂಗಳೂರು :** ರೈತರ ಸ್ವಾವಲಂಬಿ ಬದುಕಿಗೆ ಪೂರಕವಾಗಿ ರಾಜ್ಯ ಸರ್ಕಾರ ಅನೇಕ ಯೋಜನೆಗಳನ್ನು ಹಾಕಿಕೊಳ್ಳುತ್ತಿದೆ. ಎಲ್ಲ ರೈತರಿಗೂ ಸಾಲ ಸೌಲಭ್ಯ ಸಿಗಬೇಕು ಎಂಬ ನಿಟ್ಟಿನಲ್ಲಿ ಕೃಷಿ ಪತ್ತಿನ ಸಹಕಾರ ಸಂಸ್ಥೆಗಳ ಮೂಲಕ ಈಗಾಗಲೇ 12,35,033 ರೈತರಿಗೆ 9,136.89 ಕೋಟಿ ರೂಪಾಯಿ ಸಾಲ ವಿತರಿಸಲಾಗಿದೆ ಎಂದು ಸಹಕಾರ ಎಸ್.ಟಿ. ಸೋಮಶೇಖರ್ ಅವರು ತಿಳಿಸಿದ್ದಾರೆ.

ಪ್ರಸಕ್ತ ಸಾಲಿನಲ್ಲಿ 30,85,644 ರೈತರಿಗೆ 20810 ಕೋಟಿ ರೂ. ಕೃಷಿ ಸಾಲ ನೀಡುವ ಗುರಿಯನ್ನು ಹಾಕಿಕೊಳ್ಳಲಾಗಿದ್ದು, ಶೀಘ್ರವೇ ಈ ವರ್ಷದ ಗುರಿಯನ್ನು ತಲುಪಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶೇಕಡಾ 125 ರಷ್ಟು ಸಾಲ ನೀಡಿಕೆ ಗುರಿ ನಮ್ಮದು

ಕಳೆದ ಸಾಲಿನಲ್ಲಿ 25.12 ಲಕ್ಷ ರೈತರಿಗೆ 15,802 ಕೋಟಿ ರೂಪಾಯಿ ಸಾಲ ನೀಡುವ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ಆದರೆ, ನಾನು ಇಲಾಖೆಯಲ್ಲಿ ಕಾಲ ಕಾಲಕ್ಕೆ ಪ್ರಗತಿ ಪರಿಶೀಲನೆ ನಡೆಸಿದ್ದಲ್ಲದೆ, ಡಿಸಿಸಿ ಬ್ಯಾಂಕ್‌ಗಳಿಗೆ ಖುದ್ದು ಭೇಟಿ ನೀಡುವ ಮೂಲಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಾಕಷ್ಟು ಶ್ರಮವಹಿಸಿದ್ದೆ. ಅಲ್ಲದೆ, ಬ್ಯಾಂಕ್‌ಗಳ ಕುಂದುಕೊರತೆಗಳನ್ನೂ ನಿವಾರಿಸಿದ್ದೇನೆ. ಈ ನಿಟ್ಟಿನಲ್ಲಿ ರಾಜ್ಯದ 21 ಡಿಸಿಸಿ ಬ್ಯಾಂಕ್‌ಗಳು ಸಹ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ್ದವು. ಇದರ ಪರಿಣಾಮವಾಗಿ 26,19,015 ರೈತರಿಗೆ 17,901.21 ಕೋಟಿ ರೂಪಾಯಿ ಸಾಲವನ್ನು ವಿತರಣೆ ಮಾಡಿ ಒಟ್ಟು ಶೇಕಡಾ 115 ರಷ್ಟು ಸಾಧನೆಯನ್ನು ಕೃಷಿ ಪತ್ತಿನ ಸಂಸ್ಥೆಗಳು ಮಾಡಿವೆ.

ಈ ಬಾರಿ ನೂರಕ್ಕೆ ನೂರು ಗುರಿ ಮುಟ್ಟುವುದಲ್ಲದೆ, ಕಳೆದ ಬಾರಿಯ ಸಾಧನೆಗಿಂತಲೂ ಹೆಚ್ಚಿನ ಸಾಧನೆ ಮಾಡುವಲ್ಲಿ ನಮ್ಮೆಲ್ಲರ ಪ್ರಯತ್ನಗಳು ಸಾಗಿವೆ. ಹಾಗಾಗಿ ಪ್ರಸಕ್ತ ಬಾರಿ ಶೇಕಡಾ 125ರಷ್ಟು ಸಾಲ ನೀಡಿಕೆಯತ್ತ ನಮ್ಮೆಲ್ಲರ ಚಿತ್ತವನ್ನು ಹರಿಸಿದ್ದೇವೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## "ಲೆಕ್ಕಪರಿಶೋಧನಾ ದೃಢೀಕರಣ ಪತ್ರ"

ಈ ಮೇಲ್ಕಂಡ ಯಶವಂತಪುರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ಲಿ., ಬೆಂಗಳೂರು-22 ಇದರ 2020-21ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಮಾಡಿರುತ್ತೇನೆ. ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿ ಜಮಾ-ಖರ್ಚು ತಃಖ್ತೆ, ಲಾಭ-ನಷ್ಟ ತಃಖ್ತೆ ಮತ್ತು ಆಸ್ತಿ-ಜವಾಬ್ದಾರಿ ತಃಖ್ತೆಯನ್ನು ಸಂಘದ ಲೆಕ್ಕಪತ್ರಗಳೊಂದಿಗೆ ಪರಿಶೀಲಿಸಿರುತ್ತೇನೆ. ಸಂಬಂಧಿಸಿದ ಬಾಬ್ತುಗಳಿಗೆ ಸೂಕ್ತ ಸಮಜಾಯಿಷಿಗಳನ್ನು ಸಂಬಂಧಿಸಿದವರಿಂದ ಪಡೆದಿರುತ್ತೇನೆ. ನನ್ನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗೊಳಪಟ್ಟು ನನ್ನ ಅತ್ಯುತ್ತಮ ಜ್ಞಾನ ಮತ್ತು ತಿಳುವಳಿಕೆಯಂತೆ ದಿನಾಂಕ : 31.03.2021ರ ಅಂತ್ಯಕ್ಕೆ ಸಂಘದ ನಿಜವಾದ ಆರ್ಥಿಕ ಸ್ಥಿತಿಯನ್ನು ತೋರಿಸುತ್ತದೆಂದು ಅಭಿಪ್ರಾಯಪಡುತ್ತೇನೆ.

**ಗೀತಾ ಎ.ಬಿ**

ಸನ್ನದು ಲೆಕ್ಕಪರಿಶೋಧಕರು, ಗೀತಾ ಚಂದ್ರಕಾಂತ್ ಅಂಡ್ ಕೋ.

**ಸಾಲಗಳ ಮೇಲಿನ ಬಡ್ಡಿ:**

ಮನೆ ಕಟ್ಟಲು, ವಿದ್ಯಾಭ್ಯಾಸ 8.50%, ಸ್ಥಿರಾಸ್ತಿ ಅಡಮಾನ ಸಾಲ 9.25% , ಬಿ-ಖಾತಾ ಸ್ಥಿರಾಸ್ತಿ ಸಾಲ 11%

ಚಿನ್ನಾಭರಣ ಸಾಲ 8.50%, ಸ್ಥಿರಾಸ್ತಿ ಜಾಮೀನು ಸಾಲ 12%, ವಿಶೇಷ ಜಾಮೀನು ಸಾಲ 12%,

ಜಾಮೀನು ಸಾಲ 12%, ಸ್ಥಿರಾಸ್ತಿ ಸಾಲ ಗರಿಷ್ಠ ಮಿತಿ ರೂ.1 ಕೋಟಿ



# ದೀಪಾವಳಿ – ಕತ್ತಲೆಯಿಂದ ಬೆಳಕಿನೆಡೆಗೆ

▸▸ ಎನ್.ಆರ್. ಪಾಟೀಲ, ಹಿಂಡಲಗಾ ಬೆಳಗಾವಿ.

**"ದೀಪಾವಳಿ" ಹಬ್ಬಗಳ ರಾಜ. ನಮ್ಮ ಹಬ್ಬಗಳಲ್ಲೇ ಅತ್ಯಂತ ಪುರಾತನ ಹಬ್ಬ. ಜೋಡಿ ದೀಪಗಳ ಸಾಲೇ ದೀಪಾವಳಿ ಹಬ್ಬ. ನಮ್ಮ ಭಾರತೀಯ ಪರಂಪರೆಯಲ್ಲಿ ಹಬ್ಬಗಳಿಗೆ ಬರವಿಲ್ಲ. ಆದರೆ ಎಲ್ಲ ಹಬ್ಬಗಳಿಗೂ ಒಂದು ಅರ್ಥ–ಸಾಧ್ಯತೆಗಳನ್ನು ಕಲ್ಪಿಸಿರುವುದು ನಮ್ಮ ಪೂರ್ವಜರ ಜಾಣ್ಮೆಯ ಸೂಚಕ. ಒಂದೊಂದು ಹಬ್ಬಗಳಿಗೆ ಒಂದೊಂದು ಪೌರಾಣಿಕ ಹಿನ್ನೆಲೆ, ನಂಬಿಕೆ, ಆಧ್ಯಾತ್ಮಿಕತೆ, ಸಾಮಾಜಿಕ ಪ್ರಜ್ಞೆಗಳಿಗೆ ಹುಟ್ಟು ಹಾಕಿರುವ ನಮ್ಮ ಪ್ರಾಚೀನರು ನಿಜಕ್ಕೂ ವಂದನೀಯರು. ಈ ವೈವಿಧ್ಯತೆಯೇ ನಮ್ಮ ಹಬ್ಬಗಳ ಮೂಲ ಬಂಡವಾಳ. ಆದರೆ ಎಲ್ಲ ಹಬ್ಬಗಳ ಸಂದೇಶ ಮಾತ್ರ ಒಂದೇ. ದುಷ್ಟ ನಿಗ್ರಹ ಶಿಷ್ಟ ಪರಿಪಾಲನೆಗೆ ಒತ್ತು ನೀಡುವ ನಮ್ಮ ಹಬ್ಬಗಳು ಕೂಡಿ ಬಾಳಿದರೆ ಸ್ವರ್ಗಸುಖ ಎಂಬ ಸಂದೇಶ ಸಾರುತ್ತವೆ. ಜ್ಞಾನ ಬೆಳಗಿಸುವ ಬೆಳಕಿನ ಹಬ್ಬ ದೀಪಾವಳಿ.**

ದೀಪಾವಳಿಯ ಆಚರಣೆ ನೀರು ತುಂಬುವ ಸಂಭ್ರಮದೊಂದಿಗೆ ಆರಂಭ. ಇದನ್ನು ನೀರು ತುಂಬುವ ಹಬ್ಬವೆಂದೂ, ಧನ್ವಂತರಿ ತ್ರಯೋದಶೀ ಎಂದೂ ಕರೆಯುತ್ತಾರೆ. ಮಹಿಳೆಯರಿಗೆ ದೀಪಾವಳಿಯ ನೀರು ತುಂಬುವ ಹಬ್ಬವೆಂದರೆ ತುಂಬ ಖುಷಿ. ಇದಕ್ಕೆ ಗಂಗಮ್ಮನ ಪೂಜೆ ಎಂದೂ ಕರೆಯುತ್ತಾರೆ. ಇದನ್ನು ಮನೆಯೊಡತಿಯೇ ಮಾಡಬೇಕು. ಮನೆಯ ಬಾವಿಗೋ ಇಲ್ಲವೆ ಊರ ಕೆರೆಗೋ ಮಕ್ಕಳು, ಸೊಸೆಯರೊಂದಿಗೆ, ಜಾಗಟೆ, ವಾಲಗಗಳೊಂದಿಗೆ ಹಾಡುತ್ತ ಬೆಳಗಿನ ಜಾವವೇ ಹೋಗಿ ಬಾವಿ ಇಲ್ಲವೆ ಕೆರೆಗೆ ಪೂಜೆ ಸಲ್ಲಿಸಿ ಕೊಡದ ತುಂಬ ಗಂಗಮ್ಮನನ್ನು ತಂದು ಮನೆಯ ದೇವರ ಮುಂದೆ ಪ್ರತಿಷ್ಠಾಪಿಸುತ್ತಾರೆ. ಮಲೆನಾಡಿನಲ್ಲಿ ಇದನ್ನು" ಗಂಗಾಷ್ಟಮಿ" ಎಂದು ಕರೆಯುತ್ತಾರೆ. ಮನೆಯ ಎಲ್ಲ ಪಾತ್ರೆಗಳನ್ನು ತೊಳೆದು, ಸ್ನಾನಗೃಹವನ್ನು ಸ್ವಚ್ಛಗೊಳಿಸುತ್ತಾರೆ. ನೀರು ತುಂಬುವ, ನೀರು ಕಾಯಿಸುವ, ಪಾತ್ರೆಗಳನ್ನು ಪೂಜಿಸಿ ಕುಂಕುಮ, ಅರಿಷಿಣ ಹಚ್ಚಿ ಪೂಜಿಸುತ್ತಾರೆ. ಧೂಪ, ದೀಪ ಉರಿಸಿ ಸಂಭ್ರಮಿಸುತ್ತಾರೆ.

**ನರಕ ಚತುರ್ದಶಿ :** ಇದು 2ನೇ ದಿನದ ಹಬ್ಬ. ದ್ವಾಪಾರಯುಗದಲ್ಲಿ ನರಕಾಸುರನೆಂಬ ರಾಕ್ಷಸ ಭೂಲೋಕ ಹಾಗೂ ದೇವಲೋಕಗಳಿಗೆ ಮಹಾಕಂಟಕನಾಗಿ ಬೆಳೆದ. 16000 ರಾಜಪುತ್ರಿಯರನ್ನು ಅಪಹರಿಸಿ ತನ್ನ ಸೆರೆಮನೆಯಲ್ಲಿಟ್ಟು ಕೊಂಡಿದ್ದ. ಅವನ ಉಪಟಳ ಸಹಿಸಲಾರದ ಭೂಲೋಕ ಹಾಗೂ ದೇವಲೋಕದವರು ಶ್ರೀಕೃಷ್ಣನನ್ನು ಮೊರೆ ಹೋದರು. ಆಶ್ವೀಜ ಮಾಸದ ಕೃಷ್ಣ ಪಕ್ಷದ ಚತುರ್ದಶಿ ದಿನದಂದು ಶೀಕೃಷ್ಣ ನರಕಾಸುರನನ್ನು ಬೆನ್ನಟ್ಟಿ ಹೋಗಿ ಅವನನ್ನು ಸಂಹರಿಸಿದ್ದರಿಂದ ಆ ದಿನವನ್ನು ನರಕಚತುರ್ದಶಿ ಎಂದು ಆಚರಿಸುತ್ತಾರೆ. ನರಕಾಸುರನ ವಧೆಯಿಂದ ಆ ದಿನ ಅಶೌಚವಾದದ್ದರಿಂದ ಎಲ್ಲರೂ ಅಂದು ಎಣ್ಣೆ ಸ್ನಾನ ಮಾಡಿ ಶೌಚರಾಗತ್ತಾರೆ. ನರಕ ಸಂಹಾರದ ಖುಷಿಗಾಗಿ ಪಟಾಕಿ ಸಿಡಿಸುತ್ತಾರೆ. ಇಲ್ಲಿಯೂ ವಿಶಾಲಾರ್ಥದಲ್ಲಿ ನರಕ ಎಂದರೆ ಅಂಧಃಕಾರ. ಆ ಕತ್ತಲೆ ಕಳೆದು ಮನೆಮನ ಬೆಳಗಲಿ ಎಂದು ಅಂದು ಪ್ರಾರ್ಥಿಸುತ್ತಾರೆ. ಈ ದಿನ ಸಹೋದರಿಯರು ಸಹೋದರರಿಗೆ ಆರತಿ ಮಾಡಿ ಶುಭವಾಗಲೆಂದು ಹಾರೈಸುತ್ತಾರೆ.

**ಧನಲಕ್ಷ್ಮೀ ಪೂಜೆ :** ದೀಪಾವಳಿ ಹಬ್ಬದ ಮೂರನೇ ದಿನವೇ ಅಮಾವಾಸ್ಯೆ. ಈ ದಿನವನ್ನು ದೀಪಾವಳಿ ಹಬ್ಬದ ಮಧ್ಯದ ದಿನ ಅಥವಾ ಪ್ರಮುಖ ದಿನವೆಂದು ಪೂಜಿಸುತ್ತಾರೆ. ಆಶ್ವಯುಜ ಕೃಷ್ಣ ಅಮಾವಾಸ್ಯೆಯು ವರ್ಷದ ಅತಿ ಹೆಚ್ಚು ಕತ್ತಲೆಯ ದಿನ ಎನ್ನಲಾಗಿದೆ. ಅಂದು ಎಲ್ಲ ಕಡೆ ಧನಲಕ್ಷ್ಮಿಯ ಆರಾಧನೆ. ಲಕ್ಷ್ಮಿಯು ಮೂಲ ಪ್ರಕೃತಿಯ ಸಂಕೇತ. ಅವಳು ಸಮೃದ್ಧ ಸಂಪತ್ತಿನ ಪ್ರತೀಕ. ಅಂದು ಜನರು ತಮ್ಮ ಮನೆಗಳಲ್ಲಿ ಹೊಲಗದ್ದೆಗಳಲ್ಲಿ ಅಂಗಡಿಗಳಲ್ಲಿ ದೀಪ ಬೆಳಗಿಸುತ್ತಾರೆ. ತಮ್ಮೆಲ್ಲ ಅಶುಭಗಳನ್ನು ಹೋಗಲಾಡಿಸಿ ಐಶ್ವರ್ಯ–ಅಭಿವೃದ್ಧಿ ನೀಡೆಂದು ಲಕ್ಷ್ಮಿಯಲ್ಲಿ ಪ್ರಾರ್ಥಿಸುತ್ತಾರೆ. ವಿಶೇಷವಾಗಿ ವರ್ತಕರು ತಮ್ಮ ಅಂಗಡಿಗಳನ್ನು ಅಲಂಕರಿಸಿ ತಮ್ಮ ಲೆಕ್ಕದ ಪುಸ್ತಕವನ್ನು ಪೂಜಿಸಿ ಧನಲಕ್ಷ್ಮಿಯ ಕೃಪಾಕಟಾಕ್ಷ ಕೋರುತ್ತಾರೆ. ಶುಭ ಮತ್ತು ಲಾಭ ಎಂಬ ಎರಡು ಆಶಯಗಳನ್ನು ಬರಹದ ರೂಪದಲ್ಲಿ ಮಾಡಿಸಿ ಹೊಸ ವರ್ಷದ ಲೆಕ್ಕ ಆರಂಭಿಸುತ್ತಾರೆ. ಮತ್ತೊಂದು ನಂಬಿಕೆಯ ಪ್ರಕಾರ ಆಶ್ವೀಜ ಮಾಸದ ಅಮಾವಾಸ್ಯೆಯ ದಿನದಂದು ವಿಷ್ಣುವಿನ ಪತ್ನಿ ಲಕ್ಷ್ಮಿಯು ಸಮುದ್ರ ಮಥನದಿಂದ ಉದಿಸಿ ಬಂದಿದ್ದಕ್ಕಾಗಿ ಲಕ್ಷ್ಮಿಯ ಪೂಜೆ ಆಚರಿಸುತ್ತಾರೆ. ವ್ಯಾಪಾರಸ್ಥರು ಧನಲಕ್ಷ್ಮಿಯೊಂದಿಗೆ ಸ್ಥಿರಲಕ್ಷ್ಮಿಯನ್ನೂ ಪೂಜಿಸುತ್ತಾರೆ. ತಾವು ದುಡಿದ ಹಣ ತಮ್ಮಲ್ಲೇ ಸ್ಥಿರವಾಗಿರಲೆಂದು ಪ್ರಾರ್ಥಿಸುತ್ತಾರೆ. ಯಾಕೆಂದರೆ ಲಕ್ಷ್ಮಿ ತುಂಬ ಚಂಚಲೆ ಅಲ್ಲವೇ? ವರ್ತಕರು ಕುಬೇರನ ಪೂಜೆಯನ್ನೂ ಮಾಡುತ್ತಾರೆ.

**ಬಲಿಪಾಡ್ಯ :** ದೀಪಾವಳಿಯಲ್ಲಿ ಆಚರಿಸುವ ಬಲಿಪಾಡ್ಯಮಿಗೂ ದೀಪಗಳನ್ನರಿಸುವಿಕೆಗೂ ಒಂದು ಸಂಬಂಧವಿದೆ. ಪ್ರಹ್ಲಾದನ ಮೊಮ್ಮಗ ಬಲಿಚಕ್ರವರ್ತಿ ಮಹಾದಾನಶೂರ. ಆದರೆ ತಾನೇ "ದಾನದಲ್ಲಿ ಹೆಚ್ಚು" ಎಂಬ ಅಹಂಕಾರದಲ್ಲಿರುತ್ತಾನೆ. ಬೇಡಿದವರಗೆ ಬೇಡಿದ್ದನ್ನು ಕೊಡುತ್ತ ಮೆರೆಯುತ್ತಿದ್ದ. ನೀಡಿದ ದಾನವು ಅರ್ಥಪೂರ್ಣವಾಗಬೇಕಾದರೆ ಬಲಗೈಯಿಂದ ನೀಡಿದ ದಾನ ಎಡಗೈಗೆ ಗೊತ್ತಾಗಬಾರದು. ಅಂದರೆ ದಾನ ನೀಡಿ ನಂತರ 'ನಾನು ಕೊಟ್ಟೆ' ಎಂದು ಕೊಂಡರೆ ಅದು ಅರ್ಥ

ಕಳೆದುಕೊಳ್ಳುತ್ತದೆ. ಕಾರಣ ಭಗವಾನ್ ವಿಷ್ಣು ವಾಮನನಾಗಿ ಧರೆಗಿಳಿದು ಬಲಿಯ ಬಳಿಗೆ ಬಂದು "ಭವತಿ ಭಿಕ್ಷಾಂದೇಹಿ"ಎಂದ. ಬಲಿಚಕವರ್ತಿ ಕೊಡುವೆ ಎಂದ. ಆಗ ವಾಮನಮೂರ್ತಿಯು ಆಕಾಶದ ತುಂಬೆಲ್ಲ ಒಂದು ಹೆಜ್ಜೆಯಿಟ್ಟ. ಭೂಮಂಡಲಕ್ಕೆಲ್ಲ ಇನ್ನೊಂದು ಅಂದರೆ ಎರಡನೇ ಹೆಜ್ಜೆ ಇಟ್ಟ. ಮೂರನೆಯದಕ್ಕೆ ಜಾಗವೆಲ್ಲಿ ಎಂದು ಕೇಳಿದ. ಬಲಿಚಕ್ರವರ್ತಿಗೆ ದಾರಿಯೇ ಕಾಣಲಿಲ್ಲ. ಆಗ ಅವನಿಗೆ ತನ್ನ ಅಹಂಕಾರದ ತಪ್ಪಿನ ಅರಿವಾಯಿತು. ಕಾರಣ ಮೂರನೇ ಹೆಜ್ಜೆಗೆ ತನ್ನ ಶಿರವನ್ನೇ ನೀಡಿದ. ಬಲಿಚಕ್ರವರ್ತಿಯ ದಾನಕ್ಕೆ ವಿಷ್ಣು ತುಂಬ ಪ್ರಸನ್ನನಾಗಿ ವರಬೇಡು ಎಂದ. ಆಗ ಬಲಿಚಕ್ರವರ್ತಿಯು ದೀಪಾವಳಿಯಂದು ತಾನು ಭೂಮಿಗೆ ಬರಲು ಅನುಮತಿ ಬೇಡಿದ. ಅದಕ್ಕೆ ಭಗವಂತ ಒಪ್ಪಿದ. ಬಲಿಯ ಆಪೇಕ್ಷೆಯಂತೆ ದೀಪಾವಳಿಯ ಮೂರು ದಿನವೂ ದೀಪಗಳನ್ನುರಿಸಿ ಅಶ್ವಯುಜ ಅಮಾವಾಸ್ಯೆಯಂದು ಬಲೀಂದ್ರನನ್ನು ಆಹ್ವಾನಿಸುವ ಪದ್ಧತಿ ಬೆಳೆದು ಬಂದಿದೆ.

**ದೀಪಗಳ ಸಂದೇಶ :** ದೀಪವೆಂದರೆ ಬರೀ ಬೆಳಕಲ್ಲ ಜ್ಯೋತಿರ್ಲಕ್ಷ್ಮೀ. ಅಜ್ಞಾನ, ಅಂಧಕಾರವನ್ನು ಅಳಿಸಿ, ಜ್ಞಾನದೀವಿಗೆ ಹೊತ್ತಿಸಿ ಜ್ಞಾನದೀಪ ಬೆಳಗಬೇಕು ಎನ್ನುವುದೇ ದೀಪಾವಳಿಯ ದೀಪಗಳ ಸಂದೇಶ.



ದೀಪಕ್ಕೆ ಭಾರತೀಯ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನವಿದೆ. ಅದು ಮಹಾಲಕ್ಷ್ಮಿಯ ಸಂಕೇತ; ಪಾವಿತ್ರ್ಯದ ಪ್ರತೀತ. ಜ್ಯೋತಿ ಸ್ವರೂಪಿಣಿಯಾದ ಮಹಾಲಕ್ಷ್ಮಿಯು ಸೂರ್ಯ, ಚಂದ್ರ, ನಕ್ಷತ್ರಗಳು ಮುಂತಾದ ಎಲ್ಲ ಜ್ಯೋತಿರ್ವಸ್ತುಗಳಲ್ಲಿ ವಿರಾಜಮಾನಳಾಗಿದ್ದಾಳೆ ಎಂಬ ದೃಢ ನಂಬಿಕೆ ನಮ್ಮದು. ಅಂಧಕಾರವನ್ನು ಅಳಿಸಿ ಬೆಳಕು ತೋರುವುದು ಸೃಷ್ಟಿಯ ವಿಕಾಸದ ರಹಸ್ಯವೂ ಹೌದು. ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಿ, ಸುಜ್ಞಾನದ ದೀವಿಗೆಯನ್ನು ಹೊತ್ತಿಸಿ ಜ್ಞಾನದೀಪ ಬೆಳಗಬೇಕೆಂಬುದೇ ದೀಪದ ಮೂಲ ಧ್ಯೇಯ. ಈ ಉದ್ದೇಶದಡಿಯೇ ಭಾರತೀಯ ಸಂಸ್ಕೃತಿ ಮೆರೆಯಲೆಂದೇ ಪ್ರತಿವರ್ಷ ದೀಪಾವಳಿ ಹಬ್ಬದ ಆಚರಣೆ. ಈ ದೀಪದ ಬೆಳಕಿನಲ್ಲೇ ಸತ್ತವರ ಆತ್ಮಗಳು ದೀಪಾವಳಿಯಂದು ನಿರ್ಗಮಿಸುತ್ತವೆ ಎಂಬ ನಂಬಿಕೆ. ಈ ನಂಬಿಕೆಗೆ ಪೂರಕವಾಗಿಯೇ ಪ್ರತಿವರ್ಷ ದೀಪಾವಳಿ ಅಮಾವಾಸ್ಯೆಯಂದು ದೀಪಗಳನ್ನು ಉರಿಸುತ್ತಾರೆ. ಮಹಾಲಯ ಅಮಾವಾಸ್ಯೆಯಂದು ಯಮಲೋಕದಿಂದ ಭೂಲೋಕಕ್ಕೆ ಇಳಿದು ಬಂದ ಪಿತೃದೇವತೆಗಳು ದೀಪಾವಳಿ ಅಮಾವಾಸ್ಯೆಯವರೆಗೂ ಇಲ್ಲಿದ್ದು, ಅವರು ಇಲ್ಲಿಂದ ಹೊರಡುವಾಗ ಅವರಿಗೆ ದಾರಿ ತೋರಲೆಂದೇ ಮನೆಗಳ ಸುತ್ತಮುತ್ತ ದಾರಿಯುದ್ದಕ್ಕೂ ದೀಪಗಳನ್ನು, ಪಂಜುಗಳನ್ನು ಉರಿಸುತ್ತಾರೆ ಎನ್ನಲಾಗಿದೆ. ಯಮಲೋಕದಿಂದ ಬಂದ ಪಿತೃಗಳು ಹೊರಟು ಹೋಗುವುದೇ ಶುಭವೆಂಬ ನಂಬಿಕೆ.

ದೀಪಾವಳಿಯಲ್ಲಿ ದೀಪಗಳಿಗೆ ಅತ್ಯಂತ ಮಹತ್ವದ ಸ್ಥಾನ. ಇದು ನಾವು ನಮ್ಮ ಪರಂಪರೆಯಲ್ಲಿ ದೀಪಕ್ಕೆ ಪ್ರಾಧಾನ್ಯ ಕೊಡುತ್ತ ಬರುತ್ತಿರುವುದರ ಪ್ರತೀಕ. ಹಲವಾರು ಗ್ರಂಥಗಳು ದೀಪಾವಳಿಯ ದೀಪಗಳ ಬಗೆಗೆ ಸಾಕಷ್ಟು ಹೇಳಿವೆ. ದೀಪಾವಳಿ ಅಮಾವಾಸ್ಯೆಯನ್ನು ಪಂಚದಶಿ ಅಮಾವಾಸ್ಯೆಯೆಂದು ಗುರುತಿಸಿದ್ದು, ಅಂದಿನ ಪ್ರದೋಷ ಸಮಯದಲ್ಲಿ ಲಕ್ಷ್ಮಿಯನ್ನು ಪೂಜಿಸಿ ದೀಪಮಾಲೆ ಬೆಳಗಿಸಬೇಕೆಂದು ಹೇಳಲಾಗಿದೆ. ಬ್ರಹ್ಮಾಂಡ ಪುರಾಣದ ಪ್ರಕಾರ ಗುಡಿಗುಡಿಗಳಲ್ಲೂ ಮನೆಮನೆಗಳಲ್ಲೂ, ಅಂಗಡಿಗಳಲ್ಲೂ ಬೀದಿಗಳಲ್ಲೂ ನದಿಗಳ ದಂಡೆಯಲ್ಲೂ ಬೆಟ್ಟದ ತಪ್ಪಲಲ್ಲೂ ದೀಪಗಳನ್ನು ಹಚ್ಚಬೇಕೆನ್ನಲಾಗಿದೆ. ದೀಪ ಹಚ್ಚುವಾಗ "ತ್ವಂ ಜ್ಯೋತಿಃ ಶ್ರೀಃ" ಎಂಬ ಪ್ರಾರ್ಥನೆ ಹೇಳಬೇಕು ಅನ್ನಲಾಗಿದೆ.

**ಕತ್ತಲು ತರದಿರಲಿ ಬೆಳಕಿನ ಹಬ್ಬ :** ಹಬ್ಬಗಳ ಕೆಲವು ಆಚರಣೆಗಳನ್ನು ಮೈಮರೆತು ಆಚರಿಸುವುದರಿಂದ ಬದುಕೇ ಬರಡಾಗುವ ಸಾಧ್ಯತೆಗಳಿವೆ. ಉದಾಹರಣೆಗಾಗಿ ಪಟಾಕಿ ಸಿಡಿಸುವುದು. ದೀಪಾವಳಿಯು ಸಡಗರ ಸಂಭ್ರಮದ ಹಬ್ಬ ಎನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಬೇಜವಾಬ್ದಾರಿತನದಿಂದ ವರ್ತಿಸಿದರೆ ಸುಂದರ ಬದುಕನ್ನೇ ಕತ್ತಲಾಗಿಸಿಕೊಳ್ಳುವ ಪ್ರಮೇಯ ಬಂದರೂ ಬರಬಹುದು. ಹಬ್ಬದ ವೇಳೆ ಮೈಮರೆತು ವರ್ತಿಸಿ ಗಾಯಗೊಂಡು ಜೀವನವಿಡೀ ನರಳುತ್ತಾರೆ. ಕೆಲವರು ಮೈಮರೆತು ಕಣ್ಣು–ಕಿವಿ ಕಳೆದುಕೊಂಡು ಹೈರಾಣಾಗುತ್ತಾರೆ. ಎಷ್ಟೇ ಸಂಭ್ರಮವಿರಲಿ ಜಾಗರೂಕತೆಯಿಂದ ವರ್ತಿಸಬೇಕು. ಒಂದು ಸಣ್ಣ ಪಟಾಕಿ ನಿಮ್ಮ ಬದುಕಿಗೆ ಮಾರಕವಾಗಬಹುದು. ಜೊತೆಗೆ ಪಟಾಕಿಗಳನ್ನು ಸಿಡಿಸಿ ನಿಮ್ಮ ಪರಿಸರವನ್ನೂ ನೀವೇ ಹಾಳು ಮಾಡಿಕೊಳ್ಳುತ್ತಿರುವಿರಿ. ಜಿದ್ದಿಗೆ ಬಿದ್ದಂತೆ ಪಟಾಕಿ ಸಿಡಿಸುವುದರಿಂದ ಆಗುವ ಲಾಭವೇನು ಎಂಬುದನ್ನು ಚಿಂತಿಸಿ ವರ್ತಿಸಿ. ಹೆಚ್ಚು ಹೆಚ್ಚು ಪಟಾಕಿ ಸಿಡಿಸಿ ಹಬ್ಬ ಆಚರಿಸಿದರೆ ಹಬ್ಬ ಜೋರು ಎನ್ನುವುದು ತಪ್ಪು ಕಲ್ಪನೆ. ಹಬ್ಬದಲ್ಲಿ ನಿಜಕ್ಕೂ ಆಡಂಬರ ತೋರಿಕೆ ಬೇಡ. ಭಯಭಕ್ತಿಯಿಂದ ಆಚರಿಸಿ ಪ್ರಕೃತಿದತ್ತವಾಗಿ ಬಂದಿರುವ ಹಬ್ಬಗಳನ್ನು ಮೂಢತನದಿಂದ ಆಚರಿಸುವುದನ್ನು ನಿಲ್ಲಿಸಬೇಕು. ಆಚರಣೆಯಲ್ಲಿ ಐಕ್ಯತೆ, ಸೌಹಾರ್ದತೆ, ಸಹಬಾಳ್ವೆ ಇರಲಿ.

ಒಟ್ಟಾರೆಯಾಗಿ ದೀಪಾವಳಿ ಹೆಸರೇ ಹೇಳುವಂತೆ ದೀಪಗಳ ಹಬ್ಬ. ಈ ಹಬ್ಬದ ಒಂದೊಂದು ದಿನದಾಚರಣೆಗೂ ಒಂದೊಂದು ಪೌರಾಣಿಕ ಹಿನ್ನೆಲೆಗಳಿವೆ. ದೀವಾಲಿ, ದೀಪಾಲಿಕಾ, ದೀಪಾವಳಿ ಎಂದೆಲ್ಲ ಕರೆಯುವ ಹಬ್ಬ ದೀಪಾವಳಿ ಅಂಧಕಾರ ಅಳಿಸಿ ಬೆಳಕಿನೆಡೆಗೆ ಕರೆದೊಯ್ಯುವ ಹಬ್ಬ. ಭಾರತೀಯ ಸಂಸ್ಕೃತಿಯಲ್ಲಿ ಪ್ರಗತಿ ಹಾಗೂ ಸಹಬಾಳ್ವೆಯ ಪ್ರತೀಕವೇ ದೀಪಾವಳಿ. ಅಹಂಕಾರದ ವಿರುದ್ಧ ವಿಜಯಿಯಾದ ದಿನವೇ ದೀಪಾವಳಿ. ಕತ್ತಲಿನಿಂದ ಬೆಳಕಿನೆಡೆಗೆ, ಅಜ್ಞಾನದಿಂದ ಸುಜ್ಞಾನದೆಡೆಗೆ, ಅಶಾಂತಿಯಿಂದ ಶಾಂತಿಯೆಡೆಗೆ ಸಾಗುವುದೇ ದೀಪಾವಳಿ. ಮನೆ–ಮನ ಬೆಳಗುವುದೇ ದೀಪಾವಳಿ.

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯಪತ್ರಿಕೆ**

| | | |
|---|---|---|
| ಭಾಗ–೪ಎ<br>Part-IVA | ಬೆಂಗಳೂರು, ಗುರುವಾರ, ೦೭, ಅಕ್ಟೋಬರ್, ೨೦೨೧ (ಆಶ್ವಯುಜ, ೧೫, ಶಕವರ್ಷ, ೧೯೪೩)<br>BENGALURU, THURSDAY, 07, OCTOBER, 2021 (ASHWAYUJA, 15, SHAKAVARSHA, 1943) | ನಂ. ೮೨೪<br>No. 824 |

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ.**

**ಅಧಿಸೂಚನೆ.**

**ಸಂಖ್ಯೆ: ಸಂವ್ಯಶಾಇ 20 ಶಾಸನ 2021, ಬೆಂಗಳೂರು, ದಿನಾಂಕ: 07.10.2021**

The Karnataka Official Language Act, 1963 (Karnataka Act 26 of 1963) ಪ್ರಕರಣ 5–ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Co-operative Societies (Amendment) Act, 2021 (Karnataka Act 36 of 2021) ರ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯ (ಭಾಗ–IV) ರಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 36**

(2021ರ ಅಕ್ಟೋಬರ್ ತಿಂಗಳಿನ 7ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2021**

(2021ರ ಅಕ್ಟೋಬರ್ ತಿಂಗಳ 5ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನು ಮುಂದೆ ಕಂಡು ಬರುವ ಉದ್ದೇಶಗಳಿಗಾಗಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ನ್ನು (1959 ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ.

ಇದು, ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ, ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:–

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** ಈ ಅಧಿನಿಯಮವನ್ನು ಕರ್ನಾಟಕ ಸಹಕಾರ ಸಂಘಗಳ (ತಿದ್ವಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 2ನೇ ಪ್ರಕರಣದ ತಿದ್ದುಪಡಿ.–** ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (1959ರ ಕರ್ನಾಟಕ ಅಧಿನಿಯಮ ಸಂಖ್ಯೆ: 11) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ (ಇ–1–ಎ) ಖಂಡಕ್ಕೆ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಇ–1–ಎ) "ಪ್ರತಿನಿಧಿ" ಎಂದರೆ, ಮಹಾ ಸಭೆಯಲ್ಲಿ ಭಾಗವಹಿಸುವ ಮತ್ತು ಮತಚಲಾಯಿಸುವ ಅಧಿಕಾರದೊಂದಿಗೆ ಇತರ ಸಹಕಾರ ಸಂಘಗಳಲ್ಲಿ ಆ ಸಹಕಾರ ಸಂಘವನ್ನು ಪುತಿನಿಧಿಸಲು ಮತ್ತು ಆತ ಪ್ರತಿನಿಧಿ ಎಂದು ಯಾವುದಕ್ಕೆ ನೇಮಕವಾಗಿರುವನೋ ಆ ಸಹಕಾರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಲು ಅಥವಾ ಅನುಮೋದಿಸಲು ಅಥವಾ ಬೆಂಬಲಿಸಲು ಮಂಡಳಿಯಿಂದ ನೇಮಕವಾದ ಸಹಕಾರ ಸಂಘದ ನಿರ್ದೇಶಕ."

**3. 6ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 6ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ,–

(i) (ಬಿ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:

"(ಬಿ) ಎಲ್ಲಾ ಅರ್ಜಿದಾರರು ವ್ಯಕ್ತಿಗಳಾಗಿರುವಲ್ಲಿ, ಅರ್ಜಿದಾರರ ಸಂಖ್ಯೆಯು ಇಪ್ಪತ್ತಕ್ಕಿಂತ ಕಡಿಮೆ ಇರತಕ್ಕದ್ದಲ್ಲ ಮತ್ತು ಅರ್ಜಿದಾರರು ಒಂದೇ ಕುಟುಂಬಕ್ಕೆ ಸೇರಿರತಕ್ಕದ್ದಲ್ಲ; ಮತ್ತು"

(ii) (ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(ಬಿ–1) ಎಲ್ಲಾ ಅರ್ಜಿದಾರರು ಸಹಕಾರ ಸಂಘಗಳಾಗಿದ್ದಲ್ಲಿ, ಅರ್ಜಿದಾರರ ಸಂಖ್ಯೆಯು ಹದಿಮೂರಕ್ಕಿಂತ ಕಡಿಮೆ ಇರತಕ್ಕದ್ದಲ್ಲ.

ಪರಂತು ರಾಜ್ಯ ಸರ್ಕಾರವು ವಿಶೇಷ ಪ್ರಕರಣಗಳಲ್ಲಿ ಅರ್ಜಿದಾರ ಸಹಕಾರ ಸಂಘಗಳ ಸಂಖ್ಯೆಯು ಹದಿಮೂರಕ್ಕಿಂತ ಕಡಿಮೆಯಿದ್ದರೂ ಅದನ್ನು ಅನುಮತಿಸಬಹುದು."

**4. 17ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ,–

(i) (1)ನೇ ಪ್ರಕರಣದ "ಎಫ್" ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎಫ್) ಸಂಘದ ಅಥವಾ ಅದಕ್ಕೆ ಹಣಕಾಸು ಒದಗಿಸುವ ಬ್ಯಾಂಕು ಅಥವಾ ಅದರ ಒಕ್ಕೂಟ ಅಥವಾ ಅದರ ಸಂಯುಕ್ತ ಸಂಘದಿಂದ ಸಂಬಳ ಪಡೆಯುವ ಉದ್ಯೋಗಿಯಾಗಿದ್ದರೆ."

(ii) (2ಎ) ಉಪಪ್ರಕರಣದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(2–ಎ) ಯಾರೇ ವ್ಯಕ್ತಿಯು ಒಂದೇ ಬಗೆಯ ವ್ಯವಹಾರ ನಡೆಸುತ್ತಿರುವ ಎರಡು ಅಥವಾ ಹೆಚ್ಚಿನ ಸಹಕಾರ ಸಂಘಗಳಲ್ಲಿ ಸದಸ್ಯನಾಗಿರುವುದು ಅಥವಾ ಸದಸ್ಯನಾಗಿ ಮುಂದುವರೆಯುತ್ತಿರುವುದು ಕಂಡುಬಂದಲ್ಲಿ, ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ, 2021 ರ ಪ್ರಾರಂಭದ ದಿನಾಂಕದಿಂದ ತೊಂಬತ್ತು ದಿನಗಳ ಅವಧಿಯ ಒಳಗಾಗಿ ಆತನ ಆಯ್ಕೆಯ ಯಾವುದೇ ಒಂದು ಸಂಘದಲ್ಲಿ, ಸದಸ್ಯತ್ವ ಉಳಿಸಿಕೊಳ್ಳುವುದು ಆತನಿಗೆ ಬಾದ್ಯವಾಗಿರತಕ್ಕದ್ದು. ಹಾಗೆ ಮಾಡಲು ಆತನು ವಿಫಲನಾದರೆ, ಆತ ಹೊಸದಾಗಿ ಯಾವ ಸಹಕಾರ ಸಂಘಕ್ಕೆ ಸೇರಿರುವನೋ ಅದರ ಸದಸ್ಯತ್ವವು ನಿಂತು ಹೋಗುವುದೆಂದು ಭಾವಿಸತಕ್ಕದ್ದು."

**5. 20ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 20ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ,–

(i) (ಎiii) ಖಂಡದ ಪರಂತುಕದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"ಪರಂತು ಈ ಖಂಡದಲ್ಲಿರುವುದು ಯಾವುದೂ ಅದರ ನೋಂದಣಿಯಾದ ನಿಕಟ ತರುವಾಯ ನಡೆಯುವ ಅಂಥ ಸಂಘದ ಮೊದಲ ಮಹಾಸಭೆಯಲ್ಲಿ ಮತ್ತು ಸಂಘದ ಆಡಳಿತ ಮಂಡಳಿಯ ಮೊದಲ ಚುನಾವಣೆಯಲ್ಲಿ ಭಾಗವಹಿಸುವ ಸದಸ್ಯನಿಗೆ ಅನ್ವಯವಾಗತಕ್ಕದಲ್ಲ."

(ii) (ಎ–iv) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:–

"(ಎ–iv) ಆತನಿಗೆ ಯುಕ್ತವಾಗಿ ತಿಳಿಸಲಾದ ಕಳೆದ ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಯಾವುದೇ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗಲು ವಿಫಲನಾದ ಒಬ್ಬ ಸದಸ್ಯ, ಒಬ್ಬ ಪ್ರತಿನಿಧಿ ಅಥವಾ ಒಬ್ಬ ನಿಯೋಗಿ."

(iii) ಪರಂತುಕವನ್ನು ಹೊರತುಪಡಿಸಿ (ಎ–V) ಖಂಡದ ಬದಲಿಗೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:

"(ಎ–V) ಹಿಂದಿನ ಐದು ಸಹಕಾರ ವರ್ಷಗಳ ಪೈಕಿ ಯಾವುದೇ ಎರಡು ಸಹಕಾರ ವರ್ಷಕ್ಕಾಗಿ ಉಪವಿಧಿಗಳಲ್ಲಿ ನಿರ್ಧಿಷ್ಟಪಡಿಸಬಹುದಾದಂಥ ಕನಿಷ್ಠ ಸೇವೆಗಳನ್ನು ಅಥವಾ ಸೌಲಭ್ಯಗಳನ್ನು ಬಳಸಿಕೊಳ್ಳಲು ವಿಫಲನಾದ ಒಬ್ಬ ಸದಸ್ಯ ಅಥವಾ ಒಬ್ಬ ಪ್ರತಿನಿಧಿ."

(iv) (ಎ–V) ಖಂಡದ ಅಡಿಯಲ್ಲಿನ ಪರಂತುಕದಲ್ಲಿ "ಮೂರು ವರ್ಷಗಳ" ಎಂಬ ಪದಗಳಿಗೆ "ಒಂದು ವರ್ಷದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(v) (ಬಿ) ಖಂಡದಲ್ಲಿನ ವಿವರಣೆಯಲ್ಲಿ "ಹದಿನೈದು ದಿನಗಳಿಗೆ" ಮತ್ತು "ಮೂವತ್ತು ದಿನಗಳಿಗೆ" ಎಂಬ ಪದಗಳ ಬದಲಿಗೆ ಇಪ್ಪತ್ತೊಂದು ದಿನಗಳಿಗೆ" ಮತ್ತು 'ನಲವತ್ತೈದು ದಿನಗಳಿಗೆ" ಎಂಬ ಪದಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು;

**6. 22ನೇ ಹೊಸ ಪ್ರಕರಣದ ಸೇರ್ಪಡೆ.–** ಮೂಲ ಅಧಿನಿಯಮದ 21ನೇ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

**"22. ಷೇರುಗಳನ್ನು ಹೊಂದಿರುವುದರ ಮೇಲೆ ನಿರ್ಬಂಧಗಳು:–** ಯಾವುದೇ ಸಹಕಾರಿ ಸಂಘದಲ್ಲಿ, ಸರ್ಕಾರವಲ್ಲದ ಯಾರೇ ಸದಸ್ಯನು ಅಥವಾ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆದು ಯಾವುದೇ ಇತರ ಸಹಕಾರ ಸಂಘ, ರಾಜ್ಯ ಉಗ್ರಾಣ ನಿಗಮ ಅಥವಾ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಅಡಿಯಲ್ಲಿ ರಚಿಸಲಾದ ಜಿಲ್ಲಾ ಪಂಚಾಯಿತಿ ಅಥವಾ ಯಾವುದೇ ಶಾಸನಬದ್ದ ಅಥವಾ ಶಾಸನಬದ್ಧವಲ್ಲದ ಮಂಡಳಿ, ಸಮಿತಿ ಅಥವಾ ನಿಗಮವು ನಿಯಮಿಸಬಹುದಾದಂತೆ ಸಂಘದ ಒಟ್ಟು ಷೇರು ಬಂಡವಾಳದಲ್ಲಿ ಶೇಕಡ ಐದರಷ್ಟನ್ನು ಮೀರದಂಥ ಭಾಗಕ್ಕಿಂತ ಹೆಚ್ಚಿನ ಷೇರನ್ನು ಹೊಂದತಕ್ಕದ್ದಲ್ಲ."

**7. 27ಎ ಪ್ರಕರಣದ ತಿದುಪಡಿ.–** ಮೂಲ ಅಧಿನಿಯಮದ 27ನೇ ಪ್ರಕರಣದಲ್ಲಿ,–

(i) (ಎ) ಖಂಡದಲ್ಲಿ "ಮೂರು" ಎಂಬ ಪದದ ಬದಲಿಗೆ "ಎರಡು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು:"

(ii) (ಬಿ) ಖಂಡದಲ್ಲಿ "ಉಪವಿಧಿಗಳಲ್ಲಿ" ಎಂಬ ಪದದ ಮೊದಲಿಗೆ "ಕಳೆದ ಐದು ಸಹಕಾರಿ ವರ್ಷಗಳಲ್ಲಿ ಯಾವುದೇ ಎರಡು ಸಹಕಾರಿ ವರ್ಷಗಳಿಗಾಗಿ" ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು

(iii) ಪರಂತುಕದಲ್ಲಿ "ಮೂರು ವರ್ಷಗಳ" ಎಂಬ ಪದಗಳ ಬದಲಿಗೆ "ಒಂದು ವರ್ಷ"ದ ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**8. 28ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 28ನೇ ಪ್ರಕರಣದ (2)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

"(3) ವಿಶೇಷ ಮಹಾಸಭೆಗಾಗಿ ಕೋರಂ, 27ನೇ ಪ್ರಕರಣದ (4)ನೇ ಉಪ–ಪ್ರಕರಣದಲ್ಲಿ ನಿರ್ಧಿಷ್ಟಪಡಿಸಿದಂತೆಯೇ ಇರತಕ್ಕದ್ದು."

**9. 29ಸಿ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 29ಸಿ ಪ್ರಕರಣದಲ್ಲಿ,–

(i) (1)ನೇ ಉಪಪ್ರಕರಣದ (ಎ) ಖಂಡದಲ್ಲಿ **"ಸಹಕಾರ ಸಂಘಕ್ಕೆ"** ಎಂಬ ಪದಗಳ ತರುವಾಯ "ಅಥವಾ ಸೌಹಾರ್ದ ಸಹಕಾರಿಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ii) (8)ನೇ ಉಪಪ್ರಕರಣದ (ಡಿ) ಖಂಡದಲ್ಲಿ "ಅನರ್ಹಗೊಳಿಸಬಹುದು" ಎಂಬ ಪದದ ಬದಲಿಗೆ "ತೆಗೆದುಹಾಕಬಹುದು ಮತ್ತು ಅನರ್ಹಗೊಳಿಸಬಹುದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**10. 29ಇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 29ಇ ಪ್ರಕರಣದಲ್ಲಿ, ಮೊದಲ ಪರಂತುಕದ ತರುವಾಯ, ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು ಮಂಡಳಿಯ ಅಂತಹ ರಿಕ್ತ ಸ್ಥಾನಕ್ಕಾಗಿ ಚುನಾವಣೆ ನಡೆಯುವವರೆಗೆ ಉದ್ಭವವಾಗುವ ತಾತ್ಕಾಲಿಕ ಸ್ಥಾನಕ್ಕೆ ಸಂಬಂಧಿಸಿದಂತೆ, ಅದೇ ವರ್ಗದ ಸದಸ್ಯರುಗಳ ಪೈಕಿ ನಾಮನಿರ್ದೇಶನದ ಮೂಲಕ ಮಂಡಳಿಯ ತಾತ್ಕಾಲಿಕ ಸ್ಥಾನವನ್ನು ಭರ್ತಿ ಮಾಡಬಹುದು."

**11. 39ಎಎ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 39ಎಎ ಪ್ರಕರಣದ, (2)ನೇ ಉಪಪ್ರಕರಣದಲ್ಲಿ "ಮತದಾರ ಪಟ್ಟಿಗಳನ್ನು" ಎಂಬ ಪದಗಳ ಬದಲಿಗೆ "ಮತದಾರರ ಪಟ್ಟಿಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**12. 39ಐ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 39ಐ ಪ್ರಕರಣದಲ್ಲಿ,–

(i) (4)ನೇ ಉಪ–ಪ್ರಕರಣದಲ್ಲಿ **"ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳೆಂದರೆ"** ಎಂಬ ಪದಗಳ ತರುವಾಯ **"ಚುನಾವಣಾ ಅಧಿಕಾರಿಗಳು"** ಎಂಬ ಪದಗಳನ್ನು ಸೇರಿಸತಕ್ಕದ್ದು; ಮತ್ತು,

(ii) **"ಪೋಲಿಂಗ್ ಆಫೀಸರ್‌ಗಳು ಮತ್ತು"** ಎಂಬ ಪದಗಳ ತರುವಾಯ **"ಮತದಾರರ ಪಟ್ಟಿಯನ್ನು ಸಿದ್ಧಪಡಿಸುವುದಕ್ಕಾಗಿ ಅಥವಾ"** ಎಂಬ ಪದಗಳನ್ನು ಸೇರಿಸತಕ್ಕದ್ದು.

**13. 68ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 68ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದಲ್ಲಿ:–

(i) "ನಿರ್ದೇಶಿಸಬಹುದು" ಎಂಬ ಪದದ ಬದಲಿಗೆ ನಿರ್ದೇಶಿಸತಕ್ಕದ್ದು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) "ಪದಾಧಿಕಾರಿಗಳನ್ನು" ಎಂಬ ಪದದ ತರುವಾಯ "63ನೇ ಪ್ರಕರಣದ ಅಡಿಯಲ್ಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

**14. 72ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 72ನೇ ಪ್ರಕರಣದ (5)ನೇ ಉಪ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು ಎಂದರೆ:_

"(6) ಮೇಲ್ಕಂಡ (1), (2) ಮತ್ತು (5)ನೇ ಉಪ ಪ್ರಕರಣಗಳ ಅಡಿಯಲ್ಲಿ ಸಹಕಾರ ಸಂಘದ ಸಮಾಪನಗೊಳಿಸುವ ಪ್ರಕ್ರಿಯೆಯು ರಿಜಿಸ್ಟ್ರಾರ್ ಅವರು ನಿರ್ದೇಶನ ನೀಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯೊಳಗೆ ಮುಕ್ತಾಯಗೊಳ್ಳತಕ್ಕದ್ದು:

ಪರಂತು ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಿಜಿಸ್ಟ್ರಾರರು, ಸದರಿ ಅವಧಿಯನ್ನು ಒಂದು ವರ್ಷದ ಮತ್ತೊಂದು ಅವಧಿಗೆ ವಿಸ್ತರಿಸಬಹುದು:

ಮತ್ತು ಪರಂತು ರಾಜ್ಯ ಸರ್ಕಾರವು, ರಿಜಿಸ್ಟ್ರಾರನು ಮಾಡಿದ ವರದಿಯ ಮೇಲೆ, ವಿಸ್ತರಣೆಗಾಗಿ ನೈಜ ಕಾರಣಗಳಿವೆಯೆಂದು ಮನಗಂಡರೆ, ದಾಖಲಿಸಬೇಕಾದ ಕಾರಣಗಳಿಗಾಗಿ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಹೊಂದಿರತಕ್ಕದ್ದು."

**15. ಸಹಕಾರ ಚುನಾವಣಾ ಪ್ರಾಧಿಕಾರದ ಪದಾವಳಿಯ ಪ್ರತಿಯೋಜನೆ.–** ಮೂಲ ಅಧಿನಿಯಮದಲ್ಲಿ, "ಸಹಕಾರ ಚುನಾವಣೆ ಆಯೋಗ" ಎಂಬ ಪದಗಳು ಬರುವ ಕಡೆಗಳಲ್ಲೆಲ್ಲಾ, "ಸಹಕಾರ ಚುನಾವಣಾ ಪ್ರಾಧಿಕಾರ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

The above translation of the Karnataka Co-operative Societies (Amendment) Act, 2021(Karnataka Act 36 of 2021) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**ಥಾವರ್ ಚಂದ್ ಗೆಹ್ಲೋಟ್**

**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ.

ಮತ್ತು ಅವರ ಹೆಸರಿನಲ್ಲಿ,

(ಜಿ. ಶ್ರೀಧರ್)

ಸರ್ಕಾರದ ಕಾರ್ಯದರ್ಶಿ,

ಸಂಸದೀಯ ವ್ಯವಹಾರಗಳು ಮತ್ತು.

ಶಾಸನ ರಚನೆ ಇಲಾಖೆ

# ವಿವಿಧ ಕಾಯ್ದೆಗಳಲ್ಲಿ ಇತ್ತೀಚಿನ ಬದಲಾವಣೆಯ ಕಾರಣ ಸಹಕಾರ ಸಂಘಗಳು ಗಮನಿಸಬೇಕಾದ ಪ್ರಮುಖ ಅಂಶಗಳು

▸▸ **ಬಿ.ವಿ.ರವೀಂದ್ರನಾಥ್,** ಚಾರ್ಟರ್ಡ್ ಅಕೌಂಟೆಂಟ್, ಸಾಗರ. 7353765599 : bvrnath@gmail.com

...ಹಿಂದಿನ ಸಂಚಿಕೆಯಿಂದ

● **ಪೂರ್ವಭಾವಿ ತೆರಿಗೆ ಯೋಜನೆ Presumptive Tax scheme**

- ಮಾರ್ಚ್ 2019ರಲ್ಲಿ ಹೊರಡಿಸಿರುವ ಪ್ರಕಟಣೆಯನ್ವಯ ಹಿಂದಿನ ವರ್ಷದಲ್ಲಿ ವಾರ್ಷಿಕತೆರಿಗೆದಾಯಕ ವಹಿವಾಟು 50 ಲಕ್ಷಕ್ಕಿಂತ ಕಡಿಮೆಯಿರುವ ನೋಂದಾಯಿತ ಪೂರೈಕೆದಾರರು ಪ್ರಿಸಂಪ್ಟಿವ್ ಟ್ಯಾಕ್ಸ್ ಸ್ಕೀಮನ್ನು ಆಯ್ಕೆಮಾಡಿಕೊಂಡು ತಮ್ಮ ತೆರಿಗೆದಾಯಕ ಪೂರೈಕೆಗಳ ಮೇಲೆ 6% ಜಿಎಸ್‌ಟಿ (3%+3%) ಕಟ್ಟಬಹುದಾಗಿರುತ್ತದೆ.
- ಇದು ಈಗಾಗಲೇ ಇರುವ ಕಾಂಪೋಸಿಷನ್ ಸ್ಕೀಮ್ ಅಲ್ಲ. ಕಾಂಪೋಸಿಷನ್ ಸ್ಕೀಮಿನ ಎಲ್ಲಾ ನಿಯಮಗಳು ಇದಕ್ಕೆ ಪೂರ್ಣವಾಗಿ ಅನ್ವಯಿಸದು.
- ಈ ಸ್ಕೀಮಿನಿಂದಾಗಿ ಜಿಎಸ್‌ಟಿ ನೋಂದಣಿ ಬಾಧ್ಯತೆಯ ಮಿತಿಯಾಗಲೀ, ನೋಂದಣಿಗೆಇರುವ ನಿಯಮಗಳಾಗಲೀ ಬದಲಾವಣೆ ಯಾಗುವುದಿಲ್ಲ.
- ಅಂದರೆ ನೋಂದಣಿಯ ಬಾಧ್ಯತೆಯನ್ನು ನಿರ್ಧರಿಸಲು ಮೊದಲಿನಂತೆ ವಿನಾಯಿತಿ ವಹಿವಾಟು, ತೆರಿಗೆದಾಯಕ ವಹಿವಾಟು ಸೇರಿಒಟ್ಟು ವಹಿವಾಟನ್ನು ಪರಿಗಣಿಸಬೇಕು
- ನೊಂದಾಯಿತ ಸೇವಾದಾತರ ತೆರಿಗೆದಾಯಕ ವಹಿವಾಟು ವಾರ್ಷಿಕ ಐವತ್ತು ಲಕ್ಷ ರೂಗಳನ್ನು ಮೀರದಿದ್ದಲ್ಲಿ ಅಂಥಹವರು ಈ ಸ್ಕೀಮನ್ನು ಆಯ್ಕೆಮಾಡಿ ಕೊಳ್ಳಬಹುದು.
- ಆದರೆ ಈ ಸ್ಕೀಮಿನಡಿಯಲ್ಲಿ ತೆರಿಗೆದಾಯಕ ವಹಿವಾಟನ್ನು ನಿರ್ಧರಿಸುವಾಗ ಒಟ್ಟು ವಹಿವಾಟಿನಲ್ಲಿ ಬಡ್ಡಿ ಆದಾಯವನ್ನು (ಹೂಡಿಕೆ/ಠೇವಣಿ ಮೇಲಿನ ಬಡ್ಡಿ ಮತ್ತು ನೀಡಿದ ಸಾಲಗಳ ಮೇಲಿನ ಬಡ್ಡಿ) ಹೊರತುಪಡಿಸಬೇಕು.
- ಪತ್ತಿನ ಸಹಕಾರ ಸಂಘಗಳು ಇದರ ಉಪಯೋಗ ಪಡೆಯ ಬಹುದಾಗಿರುತ್ತದೆ.
- ಅಂತರರಾಜ್ಯ ಪೂರೈಕೆದಾರರಿಗೆ ಈ ಸ್ಕೀಮು ಅನ್ವಯಿಸದು
- ಒಳಪೂರೈಕೆಗಳ ಮೇಲಿನ ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ ಸೌಲಭ್ಯವಿರುವುದಿಲ್ಲ.
- ಹೊರಪೂರೈಕೆಗಳ ಮೇಲೆ ಜಿಎಸ್‌ಟಿ ತೆರಿಗೆ ವಿಧಿಸುವಂತಿಲ್ಲ.
- ತ್ರೈಮಾಸಿಕವಾಗಿ ಸಿಎಂಪಿ–08 ನಮೂನೆ ಸಲ್ಲಿಸಿ ಅನ್ವಯಿಸುವ ತೆರಿಗೆ ಪಾವತಿಸಬೇಕು.

## ಲೆಕ್ಕಪರಿಶೋಧನಾ ವರದಿ ಸಲ್ಲಿಸಲು ಅವಧಿ ವಿಸ್ತರಣೆ

ಸಹಕಾರ ಸಂಘಗಳು ಮತ್ತು ಸೌಹಾರ್ದ ಸಹಕಾರಿ ಸಂಸ್ಥೆಗಳು 2020–21ನೇ ಸಾಲಿನ ಲೆಕ್ಕಪರಿಶೋಧನಾ ಕಾರ್ಯವನ್ನು ಮುಗಿಸಿ ವರದಿಗಳನ್ನು ಸಲ್ಲಿಸಲು ದಿನಾಂಕ: 31.10.2021 ರವರೆಗೆ ಅವಧಿಯನ್ನು ವಿಸ್ತರಿಸಿ ಆದೇಶಿಸಲಾಗಿತ್ತು. ಕೋವಿಡ್ ಹಿನ್ನೆಲೆ ಹಾಗೂ ಇನ್ನಿತರ ಕಾರಣಗಳಿಂದ ಸದರಿ ಸಂಸ್ಥೆಗಳನ್ನು ಲೆಕ್ಕಪರಿಶೋಧನಾ ವರದಿಗಳನ್ನು ಲೆಕ್ಕಪರಿಶೋಧನಾ ಇಲಾಖೆಗೆ ಸಲ್ಲಿಸಲು ದಿನಾಂಕ: 25.11.2021 ರವರೆಗೆ ಅವಕಾಶ ಕಲ್ಪಿಸಿ ಸರ್ಕಾರ ಆದೇಶ ಹೊರಡಿಸಿದೆ.



## ಇಫ್ಕೋ ಅಧ್ಯಕ್ಷ ಬಲವಿಂದರ್ ಸಿಂಗ್ ನಕಾಯ್ ನಿಧನ

**ನವದೆಹಲಿ :** ರಾಷ್ಟ್ರದ ಪ್ರತಿಷ್ಠಿತ ಸಹಕಾರಿ ಸಂಸ್ಥೆ ಇಫ್ಕೋ ಅಧ್ಯಕ್ಷರಾಗಿದ್ದ ಬಲವಿಂದರ್ ಸಿಂಗ್ ನಕಾಯ್ ಅವರು ಅನಾರೋಗ್ಯದ ಕಾರಣ ಇತ್ತೀಚೆಗೆ ನಿಧನರಾದರು.

ಇವರ ನಿಧನಕ್ಕೆ ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ ಅವರು, ಉಪಾಧ್ಯಕ್ಷರಾದ ಡಾ. ಬಿ.ಡಿ. ಭೂಕಾಂತ್ ಆಡಳಿತ ಮಂಡಳಿ ನಿರ್ದೇಶಕರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ.

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಸಂಘದ ಕಾರ್ಯಕ್ಷೇತ್ರವು ತಾಲ್ಲೂಕಿನ ಒಂದು ಭಾಗಕ್ಕೆ ವ್ಯಾಪಿಸಿದ್ದರೆ, ಆಡಳಿತ ಮಂಡಲಿಯ ಕನಿಷ್ಠ ಹಾಗೂ ಗರಿಷ್ಠ ಸಂಖ್ಯೆ ..........................**

ಎ) ಒಂಬತ್ತು ಮತ್ತು ಹನ್ನೊಂದು
ಬಿ) ಹನ್ನೊಂದು ಮತ್ತು ಹನ್ನೊಂದು
ಸಿ) ಹದಿಮೂರು ಮತ್ತು ಹದಿಮೂರು
ಡಿ) ಹತ್ತು ಮತ್ತು ಹದಿಮೂರು

**2. ಕೃಷಿಯೇತರ ಪತ್ತಿನ ಸಹಕಾರ ಸಂಘವು ಪದನಿಮಿತ್ತ ನಿರ್ದೇಶಕರನ್ನು ಹೊಂದಲು ಅವಕಾಶ ..................**

ಎ) ಒಬ್ಬ ಪದನಿಮಿತ್ತ ನಿರ್ದೇಶಕ
ಬಿ) ಮೂರು ಪದನಿಮಿತ್ತ ನಿರ್ದೇಶಕರು
ಸಿ) ಸಂಘದ ಆಡಳಿತ ಮಂಡಲಿ ತೀರ್ಮಾನದಂತೆ
ಡಿ) ಯಾವುದು ಅಲ್ಲ

**3. ಸಹಕಾರ ಸಂಘದ ಆಡಳಿತ ಮಂಡಲಿಯಲ್ಲಿ ನಿರ್ದೇಶಕರಿಗೆ ಮೀಸಲು ಸ್ಥಾನ ಕಲ್ಪಿಸಿರುವುದು ..................**

ಎ) ಬಿಡಿ ಸದಸ್ಯರನ್ನು ಹೊಂದಿರುವ ಸಹಕಾರ ಸಂಘಗಳು
ಬಿ) ಬಿಡಿ ಹಾಗೂ ಇನ್ನೊಂದು ಸಂಘವನ್ನು ಹೊಂದಿರುವ ಸಹಕಾರ ಸಂಘಗಳು
ಸಿ) ಸಹಕಾರ ಸಂಘಗಳನ್ನು ಹೊಂದಿರುವ ಸಹಕಾರ ಸಂಘಗಳು
ಡಿ) ಒಂದಕ್ಕಿಂತ ಹೆಚ್ಚು ಚುನಾವಣಾ ಕ್ಷೇತ್ರಗಳನ್ನು ಹೊಂದಿರುವ ಸಹಕಾರ ಸಂಘಗಳು

**4. ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿನ ವೃತ್ತಿಪರ ಕೋ–ಆಪ್ಟ್ ನಿರ್ದೇಶಕರ ಅರ್ಹತೆ ಹಾಗೂ ಅನುಭವವನ್ನು ನಿರ್ಧರಿಸುವವರು ..........................**

ಎ) ನಬಾರ್ಡ್
ಬಿ) ರಿಸರ್ವ್ ಬ್ಯಾಂಕ್
ಸಿ) ನಿಬಂಧಕರು
ಡಿ) ರಾಜ್ಯಸರ್ಕಾರ

**5. ಪದನಿಮಿತ್ತ ನಿರ್ದೇಶಕರು .............. ಹೊಂದಿರುತ್ತಾರೆ.**

ಎ) ಮತದಾನದ ಹಕ್ಕು
ಬಿ) ಪದಾಧಿಕಾರಿಗಳ ಹುದ್ದೆಗೆ ಸ್ಪರ್ಧಿಸುವ ಹಕ್ಕು
ಸಿ) ಎರಡನೆ ಅಥವಾ ನಿರ್ಣಾಯಕ ಹಕ್ಕು (casting votes)
ಡಿ) ವಿಟೋ ಹಕ್ಕು

**6. ವೃತ್ತಿಪರ ಕೋ–ಆಪ್ಟ್ ನಿರ್ದೇಶಕರ ಅವಧಿ**

ಎ) ಐದು ವರ್ಷಗಳು
ಬಿ) ಒಂದು ವರ್ಷ
ಸಿ) ಮೂರು ವರ್ಷಗಳು
ಡಿ) ಆಡಳಿತ ಮಂಡಳಿ ಇಚ್ಛಾನುಸಾರ

**7. ಸಹಕಾರ ಸಂಘದಲ್ಲಿನ ಪದಾಧಿಕಾರಗಳ ಚುನಾವಣೆಯಲ್ಲಿ ಮತ ಚಲಾವಣೆ ಪದ್ಧತಿ ........................**

ಎ) ಕೈಎತ್ತಿ ಬೆಂಬಲ ಸೂಚಿಸುವುದು
ಬಿ) ನಿಂತು ಬೆಂಬಲ ಸೂಚಿಸುವುದು
ಸಿ) ರಹಸ್ಯ ಮತದಾನ
ಡಿ) ಧ್ವನಿ ಮತ

**8. ಸಹಕಾರ ಸಂಘಗಳ ವಿಲೀನ ಹಾಗು ವಿಭಜನೆ ಆದಲ್ಲಿ ನಿಬಂಧಕರು ಆಡಳಿತಾಧಿಕಾರಿಯನ್ನು ಗರಿಷ್ಠ ............. ಅವಧಿವರೆಗೆ ನೇಮಿಸಬಹುದು.**

ಎ) ಆರು ತಿಂಗಳು
ಬಿ) ಒಂದು ವರ್ಷ
ಸಿ) ಮೂರು ತಿಂಗಳು
ಡಿ) ಒಂದು ತಿಂಗಳು

**9. ಸಹಕಾರ ಸಂಘಗಳ ಕಾಯ್ದೆ 1959 ಕಲಂ 28–ಎ(5)ರಡಿಯಲ್ಲಿ ನೇಮಕವಾದ ಆಡಳಿತಾಧಿಕಾರಿ ಗರಿಷ್ಠ .......... ಅವಧಿಗಿಂತ ಹೆಚ್ಚು ಅವಧಿ ಆಡಳಿತಾಧಿಕಾರಿಯಾಗಿ ಮುಂದುವರೆಯುವಂತಿಲ್ಲ.**

ಎ) ಒಂದು ವರ್ಷ
ಬಿ) ಆರು ತಿಂಗಳು
ಸಿ) ಮೂರು ತಿಂಗಳು
ಡಿ) ಎರಡು ತಿಂಗಳು

**10. ಸಹಕಾರ ಸಂಘದಲ್ಲಿ ಆಯ್ಕೆಗೊಂಡ ಆಡಳಿತ ಮಂಡಲಿ ನಿರ್ದೇಶಕರ ಕಾರ್ಯಅವಧಿ ಪ್ರಾರಂಭ ......................**

ಎ) ಆಯ್ಕೆಯಾದ ಬಹುಸಂಖ್ಯಾ ನಿರ್ದೇಶಕರು ಅಧಕಾರ ಸ್ವೀಕರಿಸಿದ ದಿನಾಂಕದಿಂದ
ಬಿ) ಹಾಲಿ ಆಡಳಿತ ಮಂಡಲಿ ಕಾರ್ಯಾವಧಿ ಮುಕ್ತಾಯ ದಿನಾಂಕದಿಂದ
ಸಿ) ಆಯ್ಕೆಯಾದ ಬಹುಸಂಖ್ಯಾ ನಿರ್ದೇಶಕರು ಅಧಿಕಾರ ಸ್ವೀಕರಿಸಿದ ದಿನಾಂಕ ಅಥವಾ ಹಾಲಿ ಆಡಳಿತ ಮಂಡಲಿ ಕಾರ್ಯಾವಧಿ ಮಕ್ತಾಯ ದಿನಾಂಕ ಯಾವುದು ನಂತರವೋ ಅದು
ಡಿ) ಚುನಾವಣೆ ಫಲಿತಾಂಶ ಘೋಷಣೆ ದಿನಾಂಕದಿಂದ

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1-D, 2-C, 3-C, 4-C, 5-D, 6-A, 7-C, 8-C , 9-C , 10-C